# ಬೆಳಗಾವಿ ವಾರ್ತೆ

ಕನ್ನಡ ದಿನ ಪತ್ರಿಕೆ, ಬೆಳಗಾವಿ

ಸಂಪಾದಕರು : ಮಹೇಶ್ವರಿ ಭೀಮಶಿ ಭರಮಣ್ಣವರ
EDITOR : MAHESHWARI BHIMASHI BHARAMANNAVARA

BELAGAVI VARTE
KANNADA DAILY MORNING BELAGAVI

G-mail: belagavivarte1@gmail.com

Volume: 01 | Issue : 15 | SATURDAY 21-03-2026 | PRGI No : KNKAN/26/A0962 | Pages:4 | Rs.2.00 | M: 9742418836


## ಕೋರ್ಟ್‌ನಲ್ಲಿ ರಾಜಕೀಯ ಹೋರಾಟಬೇಡ: CM ಸಿದ್ದರಾಮಯ್ಯ ವಿರುದ್ಧ ಬೆದರಿಕೆ ಆರೋಪ, ಅರ್ಜಿ ವಿಚಾರಣೆಗೆ 'ಸುಪ್ರೀಂ' ನಕಾರ!

ನವದೆಹಲಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶದ ಮೇರೆಗೆ ತನ್ನ ಆಸ್ತಿಯನ್ನು ವಶಪಡಿಸಿಕೊಳ್ಳಲು ಬೆದರಿಕೆಗಳು ಬರುತ್ತಿವೆ ಎಂದು ಆರೋಪಿಸಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಶುಕ್ರವಾರ ನಡೆದ ವಿಚಾರಣೆಯ ಸಂದರ್ಭದಲ್ಲಿ, ಸುಪ್ರೀಂ ಕೋರ್ಟ್, ನ್ಯಾಯಾಲಯದಲ್ಲಿ ತನ್ನ ಪ್ರಕರಣವನ್ನು ಹೋರಾಡದಂತೆ ಹೇಳಿದೆ. ಬದಲಿಗೆ ಪ್ರಕರಣವನ್ನು ಹೈಕೋರ್ಟ್‌ಗೆ ಕೊಂಡೊಯ್ಯುವಂತೆ ಸಲಹೆ ನೀಡಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠವು ಪ್ರಕರಣವನ್ನು ವಜಾಗೊಳಿಸಿತು. ಇದು ಅರ್ಜಿದಾರರು ಕರ್ನಾಟಕ ಹೈಕೋರ್ಟ್ ಅನ್ನು ಸಂಪರ್ಕಿಸುವ ಆಯ್ಕೆಯನ್ನು ಮುಕ್ತಗೊಳಿಸಿದೆ. ರಾಜ್ಯಕ್ಕೆ ಪ್ರವೇಶಿಸುವಾಗ ಅವರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಅರ್ಜಿದಾರರು ಆದೇಶ ನೀಡುವಂತೆ ಕೋರಿದ್ದು ಅದಕ್ಕೆ ಕೋರ್ಟ್ ಅರ್ಜಿಯನ್ನು ಇ-



ಫೈಲಿಂಗ್ ಮಾಡುವ ಆಯ್ಕೆಯೂ ಲಭ್ಯವಿದೆ ಎಂದು ನ್ಯಾಯಮೂರ್ತಿ ಮೆಹ್ತಾಗೆ ತಿಳಿಸಿದರು.

ಅರ್ಜಿದಾರರು ಪರ ವಕೀಲರು, ನನಗೆ ಬೆದರಿಕೆ ಬರುತ್ತಿದೆ. ನಾನು ಕರ್ನಾಟಕಕ್ಕೆ ಪ್ರವೇಶಿಸಲು ಸಾಧ್ಯವಾಗುತ್ತಿಲ್ಲ. ನನ್ನ ಭದ್ರತೆಗೆ ಧಕ್ಕೆ ತರಲಾಗುತ್ತಿದೆ. ನಾನು ದೆಹಲಿಯಲ್ಲಿ ವಾಸಿಸುವಂತೆ ಒತ್ತಾಯಿಸಲ್ಪಡುತ್ತಿದ್ದೇನೆ. ನನಗೆ ಪದೇ ಪದೇ ಬೆದರಿಕೆ ಬರುತ್ತಿದೆ ಎಂದು ಹೇಳಿದರು. ಅವರು ಕರ್ನಾಟಕದಲ್ಲಿರುವ ತಮ್ಮ ಸ್ವಂತ ಮನೆಯಲ್ಲಿ ವಾಸಿಸಲು ಬಯಸುತ್ತಾರೆ. ಆದರೆ ಹಾಗೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ವಾದಿಸಿದರು.

ತನ್ನ ಆಸ್ತಿಯನ್ನು ವಶಪಡಿಸಿಕೊಳ್ಳುವ ಪ್ರಯತ್ನಗಳು ನಡೆಯುತ್ತಿವೆ. ನಾನು ಹಿಂತಿರುಗಿ ನನ್ನ ನಿವಾಸದಲ್ಲಿ ವಾಸಿಸಲು ಬಯಸುತ್ತೇನೆ ಎಂದು ಹೇಳಿದರು. ನಾನು ಹಲವು ದೂರುಗಳನ್ನು ಸಲ್ಲಿಸಿದ್ದೇನೆ. ನನ್ನ ಪರವಾಗಿ ನ್ಯಾಯಾಲಯದ ಆದೇಶಗಳನ್ನು ಪಡೆದುಕೊಂಡಿದ್ದೇನೆ, ಆದರೆ ನನಗೆ ಇನ್ನೂ ಬೆದರಿಕೆ ಬರುತ್ತಿದೆ. ನನ್ನ ಮನೆಯ ಮೇಲೆ ಕಲ್ಲು ತೂರಾಟ ನಡೆಯಿತು. ಗೂಂಡಾಗಳು ಬಂದು ಧ್ವಂಸ ಮಾಡಿದರು. ಅವರು ನನ್ನ ಆಸ್ತಿಯನ್ನು ವಶಪಡಿಸಿಕೊಳ್ಳಲು ಬಯಸುತ್ತಾರೆ ಎಂದರು. ಇಷ್ಟಕ್ಕೆ ಸುಮ್ಮನಾಗದೇ ದೆಹಲಿಯಲ್ಲಿಯೂ ನಿಮ್ಮ ಹಿಂದೆ ಜನರನ್ನು ಕಳುಹಿಸುತ್ತಿದ್ದಾರೆಯೇ? ಎಂದು ಹೇಳಿದರು.

ಇದನ್ನು ಕೋರ್ಟ್ ಪ್ರಶ್ನಿಸಿದಾಗ ವಕೀಲರು, ದೆಹಲಿಯಲ್ಲಿ ಅಲ್ಲ. ಕರ್ನಾಟಕದಲ್ಲಿ. ನಾನು ಹಿಂತಿರುಗಿ ನನ್ನ ವಸತಿ ಆಸ್ತಿಯಲ್ಲಿ ವಾಸಿಸಲು ಬಯಸುತ್ತೇನೆ. ನಾನು ಹಲವಾರು ಪೊಲೀಸ್ ದೂರುಗಳನ್ನು ದಾಖಲಿಸಿದ್ದೇನೆ. ನನ್ನ ಪರವಾಗಿ ನ್ಯಾಯಾಲಯದ ಆದೇಶಗಳನ್ನು ಸಹ ಪಡೆದಿದ್ದೇನೆ. ಇದರ ಹೊರತಾಗಿಯೂ, ಬೆದರಿಕೆಗಳು ಮುಂದುವರೆದವು. ಜನವರಿಯಲ್ಲಿ, ಪರಿಸ್ಥಿತಿಯು ನನ್ನ ಮನೆಯ ಮೇಲೆ ಕಲ್ಲು ತೂರಾಟ ನಡೆಸುವ ಹಂತಕ್ಕೆ ಹೋಯಿತು. ಗೂಂ ಡಾಗಳು ಮನೆಗೆ ನುಗ್ಗಿದರು... ಅವರು ನನ್ನ ಆಸ್ತಿಯನ್ನು ಧ್ವಂಸ ಮಾಡಿದರು. ಹಾನಿಗೊಳಿಸಿದರು ಮತ್ತು ಲೂಟಿ ಮಾಡಿದರು. ಅವರು ನನ್ನ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳಲು ಬಯಸುತ್ತಾರೆ ಎಂದು ಆರೋಪಿಸಿದರು.

## ತುಮಕೂರು ಲಾಕಪ್ ಡೆತ್ ಸಿಓಡಿ ತನಿಖೆಗೆ ಆದೇಶ

ಬೆಂಗಳೂರು: ತುಮಕೂರಿನಲ್ಲಿ ಲಾಕಪ್ ಡೆತ್ ಪ್ರಕರಣವನ್ನು ಸಿಐಡಿ ತನಿಖೆಗೆ ಆದೇಶಿಸಿದ್ದು, ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು ಗೃಹ ಸಚಿವ ಡಾ. ಜಿ ಪರಮೇಶ್ವರ್ ಹೇಳಿದ್ದಾರೆ.

ವಿಚಾರಣೆ ಮಾಡುವಾಗಲೇ ಸಾವಾಗಿದೆ. ಯಾವ ಕಾರಣದಿಂದ ಸಾವಾಗಿದೆ ಎಂಬ ಮಾಹಿತಿ ಇಲ್ಲ. ಅದಕ್ಕಾಗಿ ಸಿಐಡಿ ತನಿಖೆಗೆ ಆದೇಶ ಮಾಡಿದ್ದೇನೆ ಎಂದು ಸುದ್ಧಿಗಾರರಿಗೆ ತಿಳಿಸಿದರು.

ಹಲ್ಲೆ ಮಾಡಿದ್ದಕ್ಕೆ ಸಾವಾಗಿದೆ ಎಂಬ ಕುಟುಬಂಸ್ಥರ ಆರೋಪ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಸಿಐಡಿ ತನಿಖೆಯಲ್ಲಿ ಹೊಡೆದಿದ್ದರೂ ಗೊತ್ತಾಗಲಿದೆ. ಮರಣೋತ್ತರ ಪರೀಕ್ಷೆಯಲ್ಲಿ ಕೂಡ ಗೊತ್ತಾಗುತ್ತದೆ. ಎಲ್ಲ ಘಟನೆಗಳ ಬಗ್ಗೆ ತನಿಖೆ ಮಾಡಿ ಸಿಐಡಿ ವರದಿ ಕೊಡುತ್ತೆ. ಹಲ್ಲೆಯ ಘಟನೆ ಆಗಿದ್ರೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದರು.

ಹುಬ್ಬಳ್ಳಿಯಲ್ಲಿ ರೀಲ್ಸ್ ಮಾಡಲು ಹೋಗಿ ಅಪ್ರಾಪ್ತರು ಸಾವಿಗೀಡಾದ ಪ್ರಕರಣದ ಬಗ್ಗೆ ಮಾತನಾಡಿದ ಅವರು ಯುವಕರು ವ್ಹೀಲಿಂಗ್ ಮಾಡುವುದು, ರೀಲ್ಸ್ ಮಾಡಲು ಹೋಗ್ತಾರೆ. ಏನೋ



ಒಂದು ಖುಷಿಗೆ ಮಾಡ್ತಾರೆ. ಹಾಗೆ ಮಾಡಬಾರದು ಅಂತ ಬಹಳ ಕಂಟ್ರೋಲ್ ಮಾಡಿದ್ದೇವೆ. ಆದರೂ, ಪೊಲೀಸ್ ಕಣ್ತಪ್ಪಿಸಿ ಹೋಗಿ ಹೀಗೆ ಮಾಡಿಕೊಳ್ಳುತ್ತಾರೆ ಅಂತ ಬೇಸರ ವ್ಯಕ್ತಪಡಿಸಿದರು.

ಬೆಂಗಳೂರಿನಲ್ಲಿ ವ್ಹೀಲಿಂಗ್ ಮಾಡೋದು ಮಾನಿಟರ್ ಮಾಡಿದ್ದೇವೆ. ಆದರೂ, ಬೆಳಗಿನ ಜಾವ ಹೋಗಿ ವ್ಹೀಲಿಂಗ್ ಮಾಡ್ತಾರೆ. ಇದನ್ನು ಮಾನಿಟರ್ ಮಾಡಲು ಪೊಲೀಸರಿಗೆ ಕಷ್ಟ ಆಗುತ್ತೆ. ಈ ಬಗ್ಗೆ ಅರಿವು ಅಗತ್ಯ ಎಂದರು.

## ನಿರ್ಮಾಣಕ್ಕೆ ಉತ್ತಮ ಮಾರ್ಗದರ್ಶನ ನೀಡುತ್ತಿರುವ ಡಾ ಗಂಗಾಂಬಿಕಾ ಅಕ್ಕ ಅವರಿಗೆ ಗೌರವ ಪೂರ್ವಕವಾಗಿ ಶ್ರದ್ಧಾ ಭಕ್ತಿಯಿಂದ ನಮನ



ಹುಬ್ಬಳ್ಳಿ : ಬೀದರಿನ ಬಸವಗಿರಿ ಲಿಂಗಾಯತ ಮಹಾಮಠದ ಹಾಗೂ ಬಸವಸೇವಾ ಪ್ರತಿಷ್ಠಾನದ ಅಧ್ಯಕ್ಷರಾದ ಪೂಜ್ಯಶ್ರೀ ಡಾ ಗಂಗಾಂಬಿಕಾ ಅಕ್ಕ ಅವರನ್ನು ಹುಬ್ಬಳ್ಳಿಯಲ್ಲಿ ಭೇಟಿ ಮಾಡಿದ ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿ ಹಾಗೂ ಬಸವ ಪರಿಸರ ಸಂರಕ್ಷಣಾ ಸಮಿತಿಯ ಸದಸ್ಯರು ಹಗಲಿರುಳು ಸಮಾಜಕ್ಕೆ ಸೇವೆಯನ್ನು ಸಲ್ಲಿಸುತ್ತಿರುವ ಹಾಗೂ ಸಧೃಡ ಸಮಾಜ ನಿರ್ಮಾಣಕ್ಕೆ ಉತ್ತಮ ಮಾರ್ಗದರ್ಶನ ನೀಡುತ್ತಿರುವ ಡಾ ಗಂಗಾಂಬಿಕಾ ಅಕ್ಕ ಅವರಿಗೆ ಗೌರವ ಪೂರ್ವಕವಾಗಿ ಶ್ರದ್ಧಾ ಭಕ್ತಿಯಿಂದ ನಮನಗಳನ್ನು ಸಲ್ಲಿಸಿದರು. ಭಕ್ತಿಯಿಂದ ಅಕ್ಕ ಅವರ ದರ್ಶನ ಆಶೀರ್ವಾದ ಪಡೆದರು. ವಾಣಿಜ್ಯ ತೆರಿಗೆ ಇಲಾಖೆಯ ನಿವೃತ್ ಉಪಾಯುಕ್ತರಾದ ಗೋವಿಂದಪ್ಪ ಬಿ ಗೌಡಪ್ಪಗೋಳ, ಶಕುಂತಲಾ ಎಸ್ ಹೂಗಾರ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ ಕಾರ್ಯದರ್ಶಿ, ಬಸವ ಪರಿಸರ ಸಂರಕ್ಷಣಾ ಸಮಿತಿಯ ಕಾರ್ಯದರ್ಶಿ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ ಜಿಲ್ಲಾ ಘಟಕದ ಉಪಾಧ್ಯಕ್ಷ, ಕರ್ನಾಟಕ ವಚನ ಸಾಹಿತ್ಯ ಪರಿಷತ್‌ನ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ, ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ ಟ್ರಸ್ಟಿ, ಗ್ರಂಥಪಾಲಕ ಡಾ. ಸುರೇಶ ಡಿ. ಹೊರಕೇರಿ, ಮೃತ್ಯುಂಜಯ ಮಟ್ಟಿ , ಎಂ ಪಿ ಕುಂಬಾರ, ಡಾ. ಮಹೇಶ್ ಡಿ. ಹೊರಕೇರಿ , ಡಾ ಶಾಂತೇಶ್ ಕೆಂಚಣ್ಣವರ, ಸುಜಯ್ ಸುರೇಶ ಹೊರಕೇರಿ, ಸೋಹನ ಸುರೇಶ ಹೊರಕೇರಿ, ಸುರೇಖಾ ವಳಸಂಗ, ಭಾರತಿ ವಾಲಿ , ಸುಮಾ ರೆಡ್ಡಿ , ಕೆ ಎ ದೊಡ್ಡಮನಿ , ಶಾಲಿನಿ ರುದ್ರಮುನಿ , ನೇತ್ರಾವತಿ ದೇಸಾಯಿ , ದಾಕ್ಷಾಯಣಿ ಕೋಳಿವಾಡ , ಸುನೀತಾ ಹುಬ್ಳೀಕರ್, ಸಿದ್ದಮ್ಮ ಅಡಿವೆಣ್ಣವರ , ಡಾ. ನಾಗಲಿಂಗ ಮೂರಗಿ, ಆರ್ ಆರ್ ಎಂ ಗೋಗೇರಿ , ಸುಭಾಸ್ ಚವ್ಹಾಣ, ಡಾ ಎಂ ಬಿ. ಕೊರವರ, ವೀರಣ್ಣ ಗೋವೇಶ್ವರ, ಉದಯಚಂದ್ರ ದಿಂಡವಾರ, ಮುಂತಾದವರು ಇದ್ದರು.

## ನವೋದಯಕ್ಕೆ ಆಯ್ಕೆ

ಅಥಣಿ : ಸ್ಥಳೀಯ ನಿವಾಸಿ ಸಿಂಚನಾ ಶಿವಕುಮಾರ ಭಡಕಂಬಿ ವಿದ್ಯಾರ್ಥಿನಿ ಡಿಸೆಂಬರ್ 13 ರಂದು ಜರುಗಿದ್ದ ಜವಾಹರ ನವೋದಯ ವಿದ್ಯಾಲಯ ಪ್ರವೇಶ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದಾಳೆ.

ಸ್ಥಳೀಯ ಸಾರ್ಥಕ ನವೋದಯ ಕೋಚಿಂಗ್ ಕ್ಲಾಸ್ ನಲ್ಲಿ ಅಧ್ಯಯನ ಮಾಡಿದ್ದ ವಿದ್ಯಾರ್ಥಿನಿಗೆ ಸಂಸ್ಥೆಯ ಮುಖ್ಯಸ್ಥ ಸಂತೋಷ ಬಡಕಂಬಿ, ಅನ್ನಪೂರ್ಣ ಬಡಕಂಬಿ, ಪಾಲಕರಾದ



ಶಿವಕುಮಾರ ಬಡಕಂಬಿ, ಸಂಗೀತಾ ಹಳ್ಳದಮಳ ಸೇರಿದಂತೆ ಇತರರು ಶುಭಾಶಯ ತಿಳಿಸಿದ್ದಾರೆ.

## ಬೆಳಗಾವಿಯಲ್ಲಿ 33 ಸಾವಿರ ಮನೆಗಳಿಗೆ ಪೈಪ್ ಮೂಲಕ ಗ್ಯಾಸ್ ಪೂರೈಕೆ: ಸಿಲಿಂಡರ್‌ಗಿಂತ ಪಿಎನ್‌ಜಿ ಬೆಸ್ಟ್ ಅಂತಿದ್ದಾರೆ ಕುಂದಾನಗರಿ ಜನ

### ಪೈಪ್‌ಲೈನ್ ಮೂಲಕ ಪಿಎನ್ ಜಿ ಗ್ಯಾಸ್ ಪಡೆಯುತ್ತಿರುವ ಬಳಕೆದಾರರು ಯಾವುದೇ ಸಮಸ್ಯೆಯನ್ನು ಎದುರಿಸುತ್ತಿಲ್ಲ

ಬೆಳಗಾವಿ: ಇರಾನ್ ವಿರುದ್ಧ ಅಮೆರಿಕ, ಇಸ್ರೇಲ್ ಯುದ್ಧ ಹಿನ್ನೆಲೆಯಲ್ಲಿ ಅದರ ಬಿಸಿ ಬಹುತೇಕ ರಾಷ್ಟ್ರಗಳಿಗೆ ತಟ್ಟಿದೆ. ಅದಕ್ಕೆ ನಮ್ಮ ಭಾರತ ದೇಶವೂ ಹೊರತಾಗಿಲ್ಲ. ಸದ್ಯ ಬೆಳಗಾವಿಯಲ್ಲಿ ಪೆಟ್ರೋಲ್, ಡಿಸೇಲ್ ಸಮಸ್ಯೆ ಇಲ್ಲದಿದ್ದರೂ, ಕಮರ್ಷಿಯಲ್ ಗ್ಯಾಸ್ ಸಮಸ್ಯೆ ಉದ್ಭವವಾಗಿದೆ. ಇನ್ನು ಗೃಹ ಬಳಕೆ ಸಿಲಿಂಡರ್ ಬುಕ್ ಮಾಡಲು ಜನರು ಮುಗಿ ಬೀಳುತ್ತಿದ್ದಾರೆ. ಆದರೆ, ಗ್ಯಾಸ್ ಪೈಪ್‌ಲೈನ್ ಸಂಪರ್ಕ ಹೊಂದಿದವರು ಮಾತ್ರ ನಮಗೆ ಗ್ಯಾಸ್ ಸಮಸ್ಯೆ ಇಲ್ಲ ಎನ್ನುತ್ತಿದ್ದಾರೆ.

ಹೌದು, ಬೆಳಗಾವಿ ಮಹಾನಗರದಲ್ಲಿ ಪೈಪ್‌ಲೈನ್ ಮೂಲಕ ಅನಿಲ ಸಂಪರ್ಕ(ಪಿಎನ್ ಜಿ) ವ್ಯವಸ್ಥೆ 2018ರಿಂದಲೇ ಆರಂಭವಾಗಿದೆ. ಈವರೆಗೆ ಒಟ್ಟು 33 ಸಾವಿರ ಗೃಹ ಸಂಪರ್ಕಗಳು ಇದ್ದರೆ, 131 ವಾಣಿಜ್ಯ, 42 ಕೈಗಾರಿಕೆಗಳಿಗೆ ಪೈಪ್‌ಲೈನ್ ಮೂಲಕ ಅನಿಲ ಪೂರೈಕೆ ಮಾಡಲಾಗುತ್ತಿದೆ. ಬೆಳಗಾವಿಯ 50 ಸಾವಿರ ಗೃಹ ಸಂಪರ್ಕದ ಗುರಿ ಇಟ್ಟುಕೊಳ್ಳಲಾಗಿದೆ. ಪ್ರತಿ ಸಂಪರ್ಕಕ್ಕೂ ಮೀಟರ್ ಅಳವಡಿಸಲಾಗಿದ್ದು, ಬಳಸಿದಷ್ಟು ಬಿಲ್ ಬರುತ್ತದೆ. ಎರಡು ತಿಂಗಳಿಗೆ 50 ಎಸಿಎಂ(ಸ್ಟಾಂಡರ್ಡ್ ಕ್ಯುಬಿಕ್ ಮೀಟರ್) ಗ್ಯಾಸ್ ಬಳಸಲು ನಿಗದಿ ಪಡಿಸಲಾಗಿದೆ. ಎರಡು ತಿಂಗಳಿಗೊಮ್ಮೆ ಬಿಲ್ ತುಂಬುವ ವ್ಯವಸ್ಥೆ ಇದೆ. ನಾಲ್ಕು ಜನರು ಇರುವ ಮನೆಗೆ ಎರಡು ತಿಂಗಳಿಗೆ ಸುಮಾರು 1000–1200 ರೂ. ಬಿಲ್ ಬರುತ್ತದೆ.

ಈಗ ಗ್ಯಾಸ್ ಸಮಸ್ಯೆ ತಲೆದೋರಿದ್ದರಿಂದ ಗೃಹ, ವಾಣಿಜ್ಯ ಮತ್ತು ಕೈಗಾರಿಕೆಗಳಿಗೆ ಪೈಪ್‌ಲೈನ್ ಮೂಲಕ ಅನಿಲ ಸಂಪರ್ಕಕ್ಕೆ ಬೇಡಿಕೆ ಹೆಚ್ಚಿದೆ. ದಿನದಿಂದ ದಿನಕ್ಕೆ ಹೆಚ್ಚು ಗ್ರಾಹಕರು ಕರೆ ಮಾಡಿ ನಮಗೆ ಸಂಪರ್ಕ ನೀಡುವಂತೆ ಕೇಳಿಕೊಳ್ಳುತ್ತಿದ್ದಾರೆ.



ಸಾಧ್ಯವಾದಷ್ಟು ಹೋದ ಸಂಪರ್ಕ ಕಲ್ಪಿಸುವ ಕೆಲಸ ಮಾಡುತ್ತಿದ್ದೇವೆ ಅಂತಾ ಅನಿಲ ಪೂರೈಕೆ ಟೆಂಡರ್ ಪಡೆದಿರುವ ಮೆಗಾ ಸಿಟಿ ಗ್ಯಾಸ್ ಡಿಸ್ಟಿಬ್ಯೂಶನ್ ಪ್ರವೇಟ್ ಲಿಮಿಟೆಡ್ ಕಂಪನಿ ಪ್ರತಿನಿಧಿಯೊಬ್ಬರು ಬೆಳಗಾವಿ ವಾರ್ತೆ ಕ್ಕೆ ತಿಳಿಸಿದರು.ಪೈಪ್‌ಲೈನ್ ಮೂಲಕ ಪೂರೈಕೆಯಾಗಲಿರುವ ಗೃಹ ಬಳಕೆಯ ನೈಸರ್ಗಿಕ ಅನಿಲ ದರ ಎಲ್‌ಪಿಜಿ ಸಿಲಿಂಡರ್‌ಗಿಂತಲೂ ಕಡಿಮೆ ಬೆಲೆ ಯಲ್ಲಿ ಲಭ್ಯವಾಗುತ್ತದೆ. ಒಮ್ಮೆ ಸಂಪರ್ಕ ಪಡೆದರೆ ಮುಗಿತು ನಿರಂತರ ವಾಗಿ ಅನಿಲ ಪೂರೈಕೆ ಆಗುತ್ತದೆ. ಅನಿಲ ವ್ಯರ್ಥವಾಗುವುದಿಲ್ಲ. ಸಿಲಿಂಡರ್ ಬುಕ್ ಮಾಡುವ ಅಗತ್ಯವಿಲ್ಲ, ಮೊದಲೇ ಹಣ ಪಾವತಿಸುವಂತಿಲ್ಲ, ಬಳಸಿದ ಅನಿಲಕ್ಕೆ 2 ತಿಂಗಳಿಗೊಮ್ಮೆ ಬಿಲ್ ಪಾವತಿ ಮಾಡಬೇಕಾಗುತ್ತದೆ. ಪರಿಸರಕ್ಕೆ ಹಾನಿಕರವಲ್ಲ, ಬಳಕೆಯೂ ಸುಲಭ. ಎಲ್ಲಕ್ಕಿಂತ ಮುಖ್ಯವಾಗಿ ಇದು ಸುರಕ್ಷಿತವಾಗಿದ್ದು, ಸ್ಫೋಟವಾಗುವ ಯಾವುದೇ ಆತಂಕ ಇಲ್ಲ ಎನ್ನುತ್ತಾರೆ ಗ್ರಾಹಕರು.

**ಅರ್ಜಿ ಸಲ್ಲಿಸುವುದು ಹೇಗೆ?** ಹೊಸ ಗ್ಯಾಸ್ ಸಂಪರ್ಕ ಅಗತ್ಯತೆ ಇರುವವರು 18001231803, 04046565555 ಟೋಲ್ ಫ್ರೀ ನಂಬರ್ ಗೆ ಕಾಲ್ ಮಾಡಿದರೆ, ಮಾರ್ಕೆಟಿಂಗ್ ತಂಡ ಅವರ ಮನೆಗೆ ಭೇಟಿ ನೀಡಿ ನೋಂದಣಿ ಮಾಡಿಕೊಳ್ಳುತ್ತದೆ. ಇದಾದ ಮೂರು ದಿನದೊಳಗೆ ಅವರಿಗೆ ಗ್ಯಾಸ್ ಸಂಪರ್ಕ ಕಲ್ಪಿಸಲಾಗುತ್ತಿದೆ. ಇದಕ್ಕೆ 9500 ರೂ. ಠೇವಣಿ ಇಡಬೇಕಾಗುತ್ತದೆ. ರಾಮತೀರ್ಥ ನಗರದ ಬಸವನಕೊಳ್ಳದಲ್ಲಿ ನಮ್ಮ ಮುಖ್ಯ ಕಚೇರಿ ಇದ್ದು, ಅಲ್ಲಿಗೆ ಬಂದು ಕೂಡ ನೋಂದಣಿ ಮಾಡಿಸಿಕೊಳ್ಳಬಹುದು. ಇನ್ನು ಪ್ರತಿ ಎರಡು ತಿಂಗಳಿಗೆ ಬಿಲ್ ಬರುತ್ತದೆ. ಆನ್‌ಲೈನ್‌ನಲ್ಲೆ ಬಿಲ್ ಪಾವತಿಸ ಬಹುದು. ಇಲ್ಲವಾದರೆ, ಶಾಹು ನಗರ, ಅಶೋಕ ನಗರ ಮತ್ತು ಭಾಗ್ಯ ನಗರದಲ್ಲಿ ಬಿಲ್ಲಿಂಗ್ ಕೌಂಟರ್ ನಲ್ಲಿ ತುಂಬಬಹುದು ಎಂದು ಕಂಪನಿಯವರು ತಿಳಿಸಿದ್ದಾರೆ.

**ಪಿಎನ್‌ಜಿ ಸ್ಫೋಟ ತೀರಾ ಕಡಿಮೆ:** ಇದು ನೈಸರ್ಗಿಕ ಗ್ಯಾಸ್ ಆಗಿರುವುದರಿಂದ ಸ್ಫೋಟ ಆಗುವ ಸಾಧ್ಯತೆ ಕಡಿಮೆ ಇರುತ್ತದೆ. ಯಾಕೆಂದರೆ ಎಲ್.ಪಿ.ಜಿ. ಲಿಕ್ವಿಡ್ ರೂಪದಲ್ಲಿ ಇರುತ್ತದೆ. ಆದರೆ, ಇದು ಗಾಳಿಗಿಂತ ಕಡಿಮೆ ತೂಕ ಹೊಂದಿರುತ್ತದೆ. ಹಾಗಾಗಿ, ಗಾಳಿಯಲ್ಲಿ ಮಿಶ್ರಣವಾಗುತ್ತದೆ. ಆದ್ದರಿಂದ ಎಲ್ಲಿ ಲೀಕ್ ಆಗಿರುತ್ತದೆ ಅಲ್ಲಿ ಮಾತ್ರ ಬೆಂಕಿ ಕಾಣಿಸುತ್ತದೆ. ಸ್ಫೋಟ ಆಗುವುದಿಲ್ಲ ಮತ್ತು ದಟ್ಟ ಹೊಗೆ ಆವರಿಸಿ ಅನಾಹುತ ಕೂಡ ಆಗಲ್ಲ ಎನ್ನುತ್ತಾರೆ ನೈಸರ್ಗಿಕ ಅನಿಲ ಪೂರೈಕೆದಾರರು. ಬೆಳಗಾವಿ ವಾರ್ತೆ ಜೊತೆಗೆ ಮಾತನಾಡಿದ ನಿವೃತ್ತ ಹೆಸ್ಕಾಂ ಅಧಿಕಾರಿ ಆರ್.ಬಿ. ಕಟ್ಟಿ, ಮೂರು ವರ್ಷಗಳ ಹಿಂದೆ ನಮ್ಮ ಮನೆಗೆ ಪೈಪ್ ಲೈನ್ ಗ್ಯಾಸ್ ಸಂಪರ್ಕ ತೆಗೆದುಕೊಂಡಿದ್ದೇನೆ. ಇಲ್ಲಿಯವರೆಗೆ ಯಾವುದೇ ರೀತಿ ವ್ಯತ್ಯಯ ಕಂಡು ಬಂದಿಲ್ಲ. ಸಿಲಿಂಡರ್‌ಗಿಂತಲೂ ಬಹಳಷ್ಟು ಕಡಿಮೆ ಬಿಲ್ ಬರುತ್ತದೆ. ಎಲ್ಲಿಯಾದರೂ ಗ್ಯಾಸ್ ಲೀಕ್ ಆದರೆ, ಮೇನ್ ಪಾಯಿಂಟ್ ಬಂದ್ ಮಾಡಿದರೆ ಲೀಕ್ ಆಗುವುದು ನಿಲ್ಲುತ್ತದೆ. ಅಲ್ಲದೇ ಕಂಪನಿಯವರಿಗೆ ಕರೆ ಮಾಡಿ ತಿಳಿಸಿದರೆ ತಕ್ಷಣ ಮನೆಗೆ ಆಗಮಿಸಿ ಸಮಸ್ಯೆ ಪರಿಹರಿಸುತ್ತಾರೆ ಎಂದರು.

ಮೊದಲೆಲ್ಲಾ ಸಿಲಿಂಡರ್ ಬೇಕಾದರೆ ನಂಬರ್ ಹಚ್ಚಿ, 8–15 ದಿನ ಕಾಯಬೇಕಿತ್ತು. ಹಾಗಾಗಿ, ಇದೆಲ್ಲಾ ಸಮಸ್ಯೆ ನಮಗೆ ಬೇಡ ಅಂತಾ ಐದು ವರ್ಷಗಳ ಹಿಂದೆ ಪಿಎನ್ ಜಿ ಸಂಪರ್ಕ ಪಡೆದಿದ್ದೇವೆ. ಈಗ ನಮಗೆ ಯಾವುದೇ ರೀತಿ ಸಮಸ್ಯೆ ಇಲ್ಲ. ಸಿಲಿಂಡರ್ ಹೋಲಿಸಿದರೆ 500–600 ರೂ. ನಮಗೆ ಉಳಿಯುತ್ತದೆ. ಹೀಗೆ ಉಳಿದ ಹಣವನ್ನು ನಾವು ಆರ್.ಡಿ. ತುಂಬುತ್ತಿದ್ದೇವೆ. ಸಂಪರ್ಕ ತೆಗೆದುಕೊಳ್ಳುವ ಮುನ್ನ ನಾನು ಹೆದರಿದ್ದೆ, ಆಗ ನಮ್ಮ ಸ್ನೇಹಿತರನ್ನು ವಿಚಾರಿಸಿದಾಗ ಗ್ಯಾಸ್ ಪೈಪ್ ಲೈನ್ ಯಾವುದೇ ರೀತಿ ಅಪಾಯಕಾರಿ ಅಲ್ಲ ಎಂಬುದು ತಿಳಿಯಿತು ಎಂದು ಗೃಹಿಣಿ ಮಹಾದೇವಿ ಹಿರೇಮಠ ಹೇಳಿದರು.

ಎಲ್.ಎಸ್. ಪಂಗನ್ನವರ ಎಂಬವರು ಮಾತನಾಡಿ, ಕಳೆದ ಮೂರು ವರ್ಷಗಳಿಂದ ನಮ್ಮ ಮನೆಯಲ್ಲಿ ಪೈಪ್ ಲೈನ್ ಮೂಲಕ ಗ್ಯಾಸ್ ಸೌಲಭ್ಯ ಬಳಸುತ್ತಿದ್ದೇವೆ. ಗುಣಮಟ್ಟದ ಗ್ಯಾಸ್ ನಮಗೆ ಸಿಗುತ್ತಿದೆ. ಇಲ್ಲಿಯವರೆಗೆ ಯಾವುದೇ ತರಹದ ಸಮಸ್ಯೆ ಆಗಿಲ್ಲ. ಸಿಲಿಂಡರ್ ಬಳಸುವಾಗ ನಮಗೆ ಭಯ ಇತ್ತು. ಕಾಕ್ ಆಫ್ ಮಾಡುವುದು ಮರೆತರೆ ಎಲ್ಲಿ ಸ್ಫೋಟವಾಗುತ್ತದೆ ಅಂತಾ. ಆದರೆ, ಇದರಲ್ಲಿ ಆ ರೀತಿ ಇಲ್ಲ. ಮೊನ್ನೆ ನಮ್ಮ ತಾಯಿ ಹಾಗೇ ಚಾಲು ಮಾಡಿ ಇಟ್ಟಿದ್ದರು. ದೇವರ ಮನೆಯಲ್ಲಿ ದೀಪ ಉರಿಯುತ್ತಿತ್ತು. ಆದರೂ ಏನೂ ಅನಾಹುತ ಆಗಲಿಲ್ಲ ಎಂದರು.

# ಒಳಮೀಸಲಾತಿ ಗೊಂದಲ; ಒಳಮೀಸಲಾತಿ ರಹಿತ ಹಳೆ ಮೀಸಲಾತಿಯನ್ನು ಜಾರಿಗೆ ತಂದು ನೇಮಕಾತಿ ಮತ್ತು ಶಿಕ್ಷಣಕ್ಕೆ ತೊಂದರೆಯಗದಂತೆ ರಾಜ್ಯ ಸರ್ಕಾರ ಕ್ರಮ ವಹಿಸಿ: ರವಿ ಕಾಂಬಳೆ



**ಬೆಳಗಾವಿ ವಾರ್ತೆ**

**ಅಥಣಿ:** ಒಳಮೀಸಲಾತಿ ಬಗ್ಗೆ ಇರುವ ಸಮಸ್ಯೆಗಳು ಗೊಂದಲಗಳು ಹಾಗೂ ಅಡೆತಡೆಗಳು ನಿವಾರಣೆಯಾಗುವವರೆಗೂ ಒಳಮೀಸಲಾತಿ ರಹಿತ ಹಳೆ ಮೀಸಲಾ ತಿಯನ್ನು ಜಾರಿಗೆ ತಂದು ನೇಮಕಾತಿ ಮತ್ತು ಶಿಕ್ಷಣಕ್ಕೆ ತೊಂದರೆಯಗದಂತೆ ರಾಜ್ಯ ಸರ್ಕಾರ ಕ್ರಮ ಜರುಗಿಸಬೇಕೆಂದು ಕರ್ನಾ ಟಕ ರಾಜ್ಯ ದಲಿತ ಸಂಘರ್ಷ ಸಮೀತಿ ಅಥಣಿ ಸಂಚಾಲಕ ರವಿ ಕಾಂಬಳೆ ಹೇಳಿದರು. ಅವರು ತಾಲೂಕಿನ ಗುಂಡೆ ವಾಡಿ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ ಒಳ ಮೀಸಲಾತಿಯನ್ನು ಅನುಷ್ಟಾನ ಮಾಡುವಾಗ ರೋಷ್ಟರ ಬಿಂದುವಿನ ನಿರ್ವಹಣೆಯಿಂದ ಉದ್ಭವಿಸುವ ಸಮಸ್ಯೆಗಳಿಗೆ ಪರಿಹಾರ ನೀಡಬೇಕೆಂದು ಅವರು ಅಗ್ರಹಿಸಿದರು. **ಅವೈಜ್ಞಾನಿಕ ರೋಷ್ಟರ ಪದ್ಧತಿ** : ದಿ. 03.09.2025 ರಂದು ಸರ್ಕಾರ ಹೊರಡಿಸಿರುವ ರೋಷ್ಟರ ಆದೇಶವು ದೋಷಪೂರಿತವಾಗಿದೆ ಪರಿಶಿಷ್ಟ ಜಾತಿಯ ಶೇ. 17 ರಷ್ಟು ಮೀಸಲಾತಿಯಡಿ ನಿಗದಿಸ 'ಬೇಕಾದ ರೋಷ್ಟರ ಬಿಂದುಗಳನ್ನು ನಿಯಮ ಬಾಹಿರವಾಗಿ ಬದಲಾಯಿಸಲಾಗಿದೆ ಇದರಿಂದ ಅರ್ಹ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ತಪ್ಪುತ್ತದೆ. ತಕ್ಷಣವೇ ಈ ಆದೇಶವನ್ನು ಮರು ಪರಿಶೀಲಿಸಿ ವೈಜ್ಞಾನಿಕವಾದ ರೋಷ್ಟರ ಬಿಂದುಗಳನ್ನು ನಿಗದಿಪಡಿಸಬೇಂದರು ಇನ್ನೂ ಇದೆ ಮಾರ್ಚ್ 25 ರಂದು ಬೆಂಗಳೂರಿನ ಪ್ರಿಡಂ ಪಾರ್ಕಿನಲ್ಲಿ ನಡೆಯುತ್ತಿರುವ ಬಲಗೈ ಸಮು ದಾಯದ ಬೃಹತ ಪ್ರತಿಭಟನೆಯಲ್ಲಿ ಸಮಾ ಜದ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ತಿಳಿಸಿದರು. ಈ ವೇಳೆ ಸಮಾಜದ ಮುಖಂಡ ರಾದ ಸಂಜಯ ತಳವಲಕರ, ಮಚ್ಚೆಂದ್ರ ಖಾಂಡೆಕರ, ದತ್ತು ಕಾಂಬಳೆ, ಪಾಂಡು ರಂಗ ಕಾಂಬಳೆ, ಪಂಡಿತ ಕಾಂಬಳೆ, ಚಂದು ಬನಸೋಡೆ , ಮುಕೇಶ ಕಾಂಬಳೆ, ರಾಜು ಕಾಂಬಳೆ, ನೀಲಕಂಠ ಕಾಂಬಳೆ, ಅಮರ ಕಾಂಬಳೆ,ರಮೇಶ ಕಾಂಬಳೆ ನಿಡೋಣಿ, ಶಿವಾನಂದ ಜನವಾಡ, ಸೇರಿದಂತೆ ಬಲಗೈ ಸಮುದಾಯದ ಮುಖಂಡರು ಭಾಗಿಯಾಗಿದ್ದರು

# ಆಧ್ಯಾತ್ಮಿಕತೆ ನೆರಳಿನಲ್ಲಿ ಅರಳಿದ ಪದಕುಸುಮ "ಎತ್ತಿ ತೆಗೆದ ಮುತ್ತುಗಳು" ದೀಪಕ ಬಿಳ್ಳೂರ ಅವರ ಕವನ ಸಂಕಲನ ಲೋಕಾರ್ಪಣೆ

**ಬೆಳಗಾವಿ ವಾರ್ತೆ**

ಕವಿ , ಸಾಹಿತಿ ದೀಪಕ ಬಿಳ್ಳೂರ ಅವರ ಏಳನೆಯ ಕವನ ಸಂಕಲನ "ಎತ್ತಿ ತೆಗೆದ ಮುತ್ತುಗಳು" ರಂದು ಹಂಪಿ ಇಂಟರನ್ಯಾಷಿನಲ ಹೋಟೆಲಿನಲ್ಲಿ ಲೋಕಾರ್ಪಣೆ ಆಯಿತು. ಈ ಕವನ ಸಂಕಲನವನ್ನು ಎಸ್.ಎಲ್.ಆರ್ ಮೆಟಾಲಿಕ್ಸ್ ಲಿಮಿಟೆಡ್ ಕಂಪನಿಯ ಎಂ.ಡಿ. ಯಾಗಿರುವ ಶ್ರೀ ರಾಜಕುಮಾರ ಗೋಯಲ್ ಇವರು ಲೋಕಾರ್ಪಣೆ ಮಾಡಿದರು. ಎತ್ತಿ ತೆಗೆದ ಮುತ್ತುಗಳು ಕವನ ಸಂಕಲನ ಆಧ್ಯಾತ್ಮಿಕ ಮೌಲ್ಯ ಸಂದೇಶವಿರುವ ಕನ್ನಡ ಸಾರಸ್ವತ ಲೋಕದ ಮುತ್ತಿನ ಮಾಲೆಯಾಗಿದೆ. ಇದರಲ್ಲಿ ಪ್ರಕೃತಿ ವರ್ಣನೆ, ಜೀವನದ ಸಂಭ್ರಮ, ಸುಖ-ದುಃಖ, ನೋವು ನಲಿವು, ಮಾನವ ಸಂಬಂಧಗಳು ಇತ್ಯಾದಿ ಅಂಶಗಳು ಕಾವ್ಯಾತ್ಮಕವಾಗಿ ವ್ಯಕ್ತವಾಗಿವೆ.ಈ ಕವನ ಸಂಕಲನವು ಸರಳ ಭಾಷೆಯಲ್ಲಿ ಹೊರಹೊಮ್ಮಿದ್ದು ಹೃದಯಸ್ಪರ್ಶಿ ಕಾವ್ಯಗಳ ಸಂಗ್ರಹ, ಓದುಗರಲ್ಲಿ ಚಿಂತನೆ ಮತ್ತು ಭಾವನೆಗಳನ್ನು ಜಾಗೃತಗೊಳಿಸುವ ಪ್ರಯತ್ನವಾಗಿದೆ. ಕವಿಗಳ ಆಶಯ ಮಾನವೀಯ




ಮೌಲ್ಯಗಳಿಗೆ ಒತ್ತು ನೀಡುವುದು. ಸಮಾಜವನ್ನು ಸನ್ಮಾರ್ಗದಲ್ಲಿ ನಡೆಸುವುದು. ಮಾನವೀಯ ಸಂಬಂಧಗಳನ್ನು ಕಾಪಾಡುವುದು. ಪ್ರೀತಿ ವಿಶ್ವಾಸದಿಂದ ಮನ ಗೆಲ್ಲುವುದಾಗಿದೆ. ರಾಷ್ಟಕವಿ ಕುವೆಂಪುರಂತೆ ಕವಿಗಳ ಭಾವನೆ ವಿಶ್ವ ಶಾಂತಿಯನ್ನು ಹರಡುವ ಮಹಾ ಕಾರ್ಯವನ್ನು ಮಾಡುತ್ತದೆ .ಹಲವಾರು ಜಾತಿ ಧರ್ಮಗಳು ಭೇದ ಭಾವಗಳು ತಾಂಡವ ವಾಡುವ ಈ ಕಾಲದಲ್ಲಿ ಮಾನವ ಧರ್ಮವೇ ಶ್ರೇಷ್ಠ ಎಂದು ಸಾರುವ ಈ ಕವಿತೆಗಳು ಸರ್ವಕಾಲಿಕವಾಗಿವೆ ಎಂದು ಮಾತನಾಡಿದರು.

ಕವಿ ದೀಪಕ ಬಿಳ್ಳೂರ ಅವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿ ಪ್ರಶಸ್ತಿ, ಕಾವ್ಯ ಶ್ರೀಧರ ಪ್ರಶಸ್ತಿ, ಸಾಹಿತ್ಯ ಸೇವಾ ಭಾರ್ಗವ ಪ್ರಶಸ್ತಿ, ಗುರುಕುಲ ಸಾಹಿತ್ಯ ಶರಬ ಪ್ರಶಸ್ತಿ ಹೀಗೆ ಹತ್ತು ಹಲವಾರು ಪ್ರಶಸ್ತಿಗಳು ಇವರಿಗೆ ಸಂದಿವೆ. ಕಾರ್ಯಕ್ರಮದಲ್ಲಿ ಯೋಗೇಂದ್ರ ಚತುರ್ವೇದಿ, ರಜತ್ ಗೋಯಲ್. ರಾಜೇಶ್ ಕಾಮ್ಕರ್, ಹಾಗೂ ಎಸ್. ಎಲ್. ಆರ್. ಮೆಟಾಲಿಕ್ಸ್ ಲಿಮಿಟೆಡ್ ಕಂಪನಿಯ ಎಲ್ಲಾ ಸಿಬ್ಬಂದಿಗಳು ಹಾಜರಿದ್ದರು.

# 24ರಂದು ಮೀಸಲಾತಿ ಹೋರಾಟ; ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕರೆ

**ಬೆಳಗಾವಿ ವಾರ್ತೆ**

**ಗೋಕಾಕ:** ಬೆಂಗಳೂರಿನ ಫ್ರೀಡಂ ಪಾರ್ಕನಲ್ಲಿ ದಿ.24ರಂದು ನಡೆಯಲಿರುವ ಭೋವಿ ವಡ್ಡರ ಸಮುದಾಯದ ಮೀಸಲಾತಿ ಹೋರಾಟ ಕಾರ್ಯಕ್ರಮಕ್ಕೆ ಸಮಾಜ ಭಾಂದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಭೋವಿ ವಡ್ಡರ ವೇಲ್‌ಫೇರ್ ಸೋಸೈಟಿಯ ಜಿಲ್ಲಾಧ್ಯಕ್ಷ ಲಕ್ಷ್ಮಣ ಗಾಡಿವಡ್ಡರ ತಿಳಿಸಿದರು.


ಅವರು, ನಗರದ ಪ್ರವಾಸಿ ಮಂದಿರದಲ್ಲಿ ಭೋವಿ ವಡ್ಡರ ಸಮಾಜದ ಮೀಸಲಾತಿ ಹೋರಾಟ ಕುರಿತು ಮುಖಂಡರ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಭೋವಿ ವಡ್ಡರ ಸಮಾಜಕ್ಕೆ ಒಳ ಮೀಸಲಾತಿ ಹೆಚ್ಚಿಸುವ ಕುರಿತು ಸರಕಾರದ ಗಮನ ಸೆಳೆಯುವ ನಿಟ್ಟಿನಲ್ಲಿ ರಾಜ್ಯದಾದ್ಯಂತ ಹೋರಾ ಟಗಳನ್ನು ಆಯೋಜಿಸುವ ನಿಟ್ಟಿನಲ್ಲಿ ಈ ಬೆಂಗಳೂರಿನ ಫ್ರೀಡಂ ಪಾರ್ಕನಲ್ಲಿ ಬೃಹತ್ ಹೋರಾಟ ಹಮ್ಮಿಕೊಳ್ಳಲಾಗಿದ್ದು ಸಮಾಜ ಪ್ರತಿಯೊಬ್ಬರು ಈ



ಹೋರಾಟದಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಒಳ ಮೀಸಲಾತಿ ಹೋರಾಟ ಸಮೀತಿ ರಚನೆ ಮಾಡಲಾಯಿತು. ಭೋವಿ ವಡ್ಡರ ಸಮಾಜ ಮುಖಂಡರಾದ ಪರಶುರಾಮ ಕಲಕಟಗಿ, ಭರಮಣ್ಣ ಗಾಡಿವಡ್ಡರ, ಸಂಜಯ ಗಾಡಿವಡ್ಡರ, ಕೆಂಪಣ್ಣ ಕಲಕುಟ್ರಿ, ಯಲ್ಲಪ್ಪ ಗಾಡಿವಡ್ಡರ, ಪರಶುರಾಮ ಬಂಡಿವಡ್ಡರ, ಕಲ್ಲೊಳೆಪ್ಪ ಗಾಡಿವಡ್ಡರ, ಅರ್ಜುನ, ಆನಂದ, ಓಂಕಾರ, ಭೀಮಾ ಸೇರಿದಂತೆ ಅನೇಕರು ಇದ್ದರು.

# ಸರ್ ಸಿದ್ಧಪ್ಪ ಕಂಬಳಿ ಅವರ ಹೊಸ ಪುತ್ಥಳಿಯನ್ನು ಅನಾವರಣ



**ಬೆಳಗಾವಿ ವಾರ್ತೆ**

**ಹುಬ್ಬಳ್ಳಿ:** ಕರ್ನಾಟಕ ವಿಶ್ವವಿದ್ಯಾಲಯದ ಸರ್ ಸಿದ್ಧಪ್ಪ ಕಂಬಳಿ ಕಾನೂನು ಮಹಾವಿದ್ಯಾಲಯದ ಆವರಣದಲ್ಲಿ ಸರ್ ಸಿದ್ಧಪ್ಪ ಕಂಬಳಿ ಅವರ ಹೊಸ ಪುತ್ಥಳಿಯನ್ನು ಅನಾವ'ರಣಗೊಳಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಹುಟ್ಟಿ ಬೆಳೆದ ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ಮುಂಬೈ ಪ್ರೆಸಿಡೆನ್ಸಿಯಲ್ಲಿ ಹಲವಾರು ಖಾತೆಗಳಲ್ಲಿ ಸಚಿವರಾಗಿದ್ದ ಅದರಲ್ಲೂ ಶಿಕ್ಷಣ ಖಾತೆ ಸಚಿವರಾಗಿದ್ದಾಗ ಉತ್ತರ ಕರ್ನಾಟಕದಲ್ಲಿ ಶೈಕ್ಷಣಿಕ ಕ್ಷೇತ್ರಕ್ಕೆ ಮರೆಯಲಾಗದ ಕೊಡುಗೆ ನೀಡಿದ ಸರ್ ಸಿದ್ಧಪ್ಪ ಕಂಬಳಿ ಅವರ ಹೊಸ ಮೂರ್ತಿಗೆ ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ, ಬಸವ ಪರಿಸರ ಸಂರಕ್ಷಣಾ ಸಮಿತಿಯ ಪದಾಧಿಕಾರಿಗಳು ಮಾಲಾರ್ಪಣೆ ಮಾಡಿ ಗೌರವ ಅರ್ಪಣೆ ಮಾಡಿ, ನಮನಗಳನ್ನು ಸಲ್ಲಿಸಲಾಯಿತು ಹಾಗೂ ಸರ್ ಸಿದ್ಧಪ್ಪ ಕಂಬಳಿ ಅವರು ಮಾಡಿದ ಸೇವಾ ಕಾರ್ಯಗಳನ್ನು ಸ್ಮರಿಸಲಾಯಿತು. ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ ಕಾರ್ಯದರ್ಶಿ, ಬಸವ ಪರಿಸರ ಸಂರಕ್ಷಣಾ ಸಮಿತಿಯ ಕಾರ್ಯದರ್ಶಿ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ ಜಿಲ್ಲಾ ಘಟಕದ ಉಪಾಧ್ಯಕ್ಷ, ಕರ್ನಾಟಕ ವಚನ ಸಾಹಿತ್ಯ ಪರಿಷತ್‌ನ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ, ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ ಟ್ರಸ್ಟಿ, ಗ್ರಂಥಪಾಲಕ ಡಾ. ಸುರೇಶ ಡಿ. ಹೊರಕೇರಿ, ಗ್ರಂಥಪಾಲಕ ಚಂದ್ರಶೇಖರ ಚನ್ನಂಗಿ, ಮಂಜುನಾಥ ಎ , ಮುಂತಾದವರು ಇದ್ದರು.

# ಶುದ್ಧತೆಯ ಅನಾಹುತಗಳು ಮತ್ತು ಆರೋಗ್ಯದ ಸೂಕ್ಷ್ಮ ವ್ಯತ್ಯಾಸಗಳು

ಅಲರ್ಜಿ ಮತ್ತು ಅಸ್ತಮಾ ಇತ್ತೀಚಿನ ದಿನಗಳಲ್ಲಿ ಜಗತ್ತಿನಾ ದ್ಯಂತ ಹೆಚ್ಚು ಹೆಚ್ಚು ಜನರನ್ನು ಕಾಡತೊಡಗಿವೆ. ಕಳೆದ ಒಂದೇ ದಶಕದಲ್ಲಿ ಶೇ.೧೦ರಷ್ಟು ಈ ಕಾಯಿಲೆಗಳು ಏರಿಕೆಯಾಗಿರುವುದು ಕಂಡುಬರುತ್ತದೆ. ಮಂಗಳಾರತಿ ತಗೊಂಡರೆ ಉಷ್ಣ, ತೀರ್ಥ ತಗೊಂಡರೆ ಶೀತ ಎನ್ನುವಂತಾಗುತ್ತಿದೆ.

ಈ ಕಾಯಿಲೆಗಳು ನಮ್ಮನ್ನು ಹೆಚ್ಚು ಆವರಿಸಿಕೊಳ್ಳುತ್ತಿರು ವುದಕ್ಕೆ ಕಾರಣ ಹೆಚ್ಚುತ್ತಿರುವ ಸ್ವಚ್ಛತೆ! ಹಿಂದೆ ನೈರ್ಮಲ್ಯದ ಕೊರತೆಯಿಂದ ಭಯಾನಕ ಸಾಂಕ್ರಾಮಿಕ ರೋಗ ಮನುಕುಲಕ್ಕೆ ಮಾರಕವಾಗಿದ್ದು ಸತ್ಯ. ಇತ್ತ ಈಗ ಸ್ವಚ್ಛತೆ ತನ್ನ ಪಾರಾಕಾಷ್ಠತೆಯನ್ನು ತಲುಪಿದೆ. ತಮ್ಮ ಹಸ್ತ ನಮ್ಮನ್ನು ನಂಜಿನಿಂದ ನುಂಗೀತು ಎನ್ನುವ ಭಯಕ್ಕೆ ತಲುಪಿ, ಮೈ, ಮನೆಯಲ್ಲೆಲ್ಲಾ ರೋಗಾಣು ಗಳಷ್ಟೇ ಅಲ್ಲದೇ ಎಲ್ಲಾ ಸೂಕ್ಷ್ಮ ಜೀವಿಗಳನ್ನು ಕೊಂದು ಒಂದು ರೀತಿಯ ಸ್ಟೆರೈಲ್ ವಾತಾವ ರಣಕ್ಕೆ ಕಾಲಿಡುತ್ತಿದ್ದೇವೆ. ಈಗ ಯಾವುದೇ ಹೋಟೆಲ್, ಕಚೇರಿ, ಆಸ್ಪತ್ರೆ ಪರಿಶುದ್ಧವಾಗಿ ದ್ದರೆ ಬೆಳಗ್ಗೆ ಕೀಟನಾಶಕ ಹೊಡೆ ದಿದ್ದಾರೆ ಎನ್ನುವುದು ವಾಸ್ತವವಾಗಿದೆ.

ಮೊನ್ನೆ ಆಸ್ಪತ್ರೆ ಕ್ಯಾಂಟೀನ್ ನಲ್ಲಿ ತಿಂಡಿ ತಿನ್ನುತ್ತಿದ್ದಾಗಲೇ ಕೀಟನಾಶಕ ಕ್ಯಾನ್ ಹೊತ್ತ ವ್ಯಕ್ತಿ ನಮ್ಮ ಸುತ್ತ ಔಷಧಿ ಹೊಡೆದು ಹೋದರು. ಅವರ ಕರ್ತವ್ಯ ದಿನಕ್ಕೆ ಮೂರು ಬಾರಿ ಈ ರೀತಿ ಔಷಧಿ ಹೊಡೆಯುವುದು ಎಂದು ಅವರೇ ಹೇಳಿದರು. ಅದು ಅವರ ತಪ್ಪಲ್ಲ. ನಾಗರಿಕ ಸಮಾಜದಲ್ಲಿ ಅಂತಹ ವ್ಯವಸ್ಥೆ ನಾವು ಅಂಟಿಕೊಂಡಿದ್ದೇವೆ. ಜೊತೆಗೆ ಆಯಂಟಿಬ್ಯಾಕ್ಟಿರಿಯಲ್ ಸೋಪು, ಶ್ಯಾಂಪು, ಹ್ಯಾಂಡ್ ಸ್ಯಾನಿಟೈಸರ್ ಮಾತ್ರವಲ್ಲದೆ, ಆಂಟಿಬಾಯಾಟಿಕ್ ಟ್ರೈಕ್ಲೋಸಾನ್ ಇರುವ ಪೇಸ್ಟ್ ಕೂಡ ಬಳಕೆಯಾಗುತ್ತಿವೆ! ಅಮೆರಿಕ ಇತ್ತೀಚೆಗೆ ಸೋಪು, ಶ್ಯಾಂಪು ಗಳಲ್ಲಿ ಈ ರೀತಿ ಆಂಟಿಬಯಾಟಿ ಕ್‌ಗಳನ್ನು ರದ್ದುಪಡಿಸಿದೆ. ಈ ರೀತಿಯ ಸ್ವಚ್ಛತೆಯಿಂದ ನಮ್ಮ ದೇಹ ಪ್ರಕೃತಿಯೊಂದಿಗೆ ಪಳಗದೆ, ಪಕ್ವವಾಗದೇ ಸುಲಭವಾಗಿ ರೋಗಗಳಿಗೆ ತುತ್ತಾಗುವಂತಾಗುತ್ತದೆ.

An easy prey for all pestilence with sickening sanitation. ಇದನ್ನು ವೈದ್ಯಕೀಯ ಕ್ಷೇತ್ರದಲ್ಲಿ ಹೈಜೀನ್ ಹೈಪಾಥಿಸಿಸ್ (Hygiene Hypothesi) ಶುದ್ದತೆಯ ಖಾಯಿ ಲೆಗಳು ಎಂದು ಗುರುತಿಸುತ್ತಾರೆ.

ದೇಹ ಎಲ್ಲಾ ರೀತಿಯ ಸೂಕ್ಷ್ಮಜೀವಿಗಳನ್ನು ಪರಿಚಯಿಸಿಕೊಂಡು ಮಿತ್ರರನ್ನು, ಶತ್ರುಗಳನ್ನು ಗುರುತಿಸಿ ತನ್ನ ಆರೋಗ್ಯ ಕವಚ ವನ್ನು ಭದ್ರಗೊಳಿಸುವಂತದ್ದು. ಲಸಿಕೆ ಕೂಡ ಇದೇ ಕೆಲಸಕ್ಕೆ ನಮ್ಮನ್ನು ಒಗ್ಗಿಸುವುದು. ನಮ್ಮ ಒಟ್ಟು ರೋಗಾಣುಗಳ ಹೋರಾಟವನ್ನು ೩ಖ ಎನ್ನುವುದುಂಟು. ಅಂದರೆ ಗುರುತಿಸುವುದು (recognize), ಪ್ರತಿಕ್ರಿಯಿಸುವುದು (react), ಮತ್ತು ಮತ್ತೆ ಕುದುರು ವುದು



(recover). ರೋಗಾಣುಗಳನ್ನು? ಸೂಕ್ಷ್ಮಜೀವ ಜಗತ್ತನ್ನು ಗುರುತಿಸುವುದಕ್ಕೆ ಅವುಗಳ ಪರಿಚಯವಿರಬೇಕು. ಪರಿಚಯಕ್ಕೆ ನಮ್ಮ ಸುತ್ತಮುತ್ತ ಸಿಗಬೇಕು. ಗುರುತಿಸಲು ತಿಳಿಯದೇ ಹೋದರೆ ಶತ್ರುವನ್ನು ಮಿತ್ರರಂತೆ ಕಾಣುವುದಾಗುತ್ತದೆ. ಜೊತೆಗೆ ಅಲ್ಲಿ ಇಲ್ಲಿ ಆಗಾಗ ಕಾಣುವ ಶತ್ರು ವಿಗೆ ಯಾವ ಆಯುಧ ಎಂಬು ದು ದೇಹಕ್ಕೆ ಗೊತ್ತಾಗಬೇಕು.

ಇದು ಚಿಕ್ಕ ವಯಸ್ಸಿನಲ್ಲಿ ಒಗ್ಗಿದ ದೇಹ ತನ್ನ ನೆನಪಿನೊಂದಿಗೆ ತನ್ನ ತೆಕ್ಕೆಯಲ್ಲಿ ಸಮರ್ಥವಾದ ಆಯುಧಗಳನ್ನು ಅಳವಡಿಸಿಕೊಳ್ಳುವಂತಾಗುತ್ತದೆ.

ಮಕ್ಕಳು ಚಿಕ್ಕ ವಯಸ್ಸಿನಲ್ಲಿ ಮಣ್ಣಿನಲ್ಲಿ ಆಡುವುದು, ರೈತ ಕುಟುಂಬದಲ್ಲಿ ಸುತ್ತಮುತ್ತ ಸಾಕು ಪ್ರಾಣಿ ಪಕ್ಷಿಗಳೊಂದಿಗೆ ಬೆರೆಯು ವುದರಿಂದ ಅಲರ್ಜಿ, ಅಸ್ತಮಾ ದಂತಹ ಕಾಯಿಲೆಗಳಿಗೆ ಕಡಿ ವಾಣ ಹಾಕಬಹುದು ಎನ್ನುತ್ತಾರೆ. ಇದರ ಅರ್ಥ ನಮ್ಮ ಸುತ್ತ ಕೊಳಕು ತುಂಬಿಕೊಳ್ಳಬೇಕು, ಗಲೀಜು ಹರಡಿಕೊಳ್ಳಬೇಕು ಎನ್ನುವ ಅರ್ಥವಲ್ಲ. ಆದರೆ ಸುತ್ತ ರಾಸಾಯನಿಕ ಸಮರ ಸಾರಿ ಶುದ್ಧತೆ ಸಾಧಿಸು ವುದರಿಂದ ಉಂಟಾಗುವ ಅನಾಹುತದ ಎಚ್ಚರಿಕೆ ಕೂಡಾ ಅಗತ್ಯ.ಟೈಪ್ ಒನ್ ಮಧುಮೇಹ, ಖಿನ್ನತೆ, ಹಲವು ಬಗೆಯ ಕ್ಯಾನ್ಸರ್, ಮಲ್ಟಿಪಲ್ ಸ್ಕ್ಲೇರೊ ಸಿಸ್.. ಹೀಗೆ ಅನೇಕ ಕಾಯಿಲೆ ಗಳು ಅತಿ ಸ್ವಚ್ಛತೆಯಿಂದ ಉಂಟಾಗು ವುದನ್ನು ಗುರುತಿಸಲಾಗಿದೆ.

ಯಾವುದೇ ಹೊಸ ಔಷಧ ಕಂಡುಕೊಳ್ಳುವಾಗ ಅದನ್ನು ಇಲಿಗಳ ಮೇಲೆ ಪ್ರಯೋಗ ಮಾಡುತ್ತಾರೆ. ಆದರೆ ಇದನ್ನು ಕಾಡಿನಲ್ಲೋ, ನಗರಗಳಲ್ಲೋ, ಮನೆಗಳಲ್ಲಿರುವ ಇಲಿಗಳ ಮೇಲೆ ಪರೀಕ್ಷಿಸುವುದಿಲ್ಲ. ಔಷಧ ಪರೀಕ್ಷಿಸಲು ಕೃತಕ ವಾತವರಣ ದಲ್ಲಿ, ಎಲ್ಲಾ ರೀತಿಯ ಸೋಂಕು, ಸೂಕ್ಷ್ಮಜೀವಿಗಳಿಂದ ತೆರೆದು ಕೊಳ್ಳದೇ ರಕ್ಷಿಸಲ್ಪಟ್ಟ ಇಲಿಗಳನ್ನು ಬಳಸುತ್ತಾರೆ. ಈ ಪ್ರಯೋಗಾಲ ಯದ ಇಲಿಗಳಿಗೂ, ಬೇರೆ ಇಲಿಗಳಿಗೂ ತಮ್ಮ ರೋಗ ನಿರೋಧಕ ಶಕ್ತಿಯಲ್ಲಿ ಅಜಗಜಾಂತರ ವ್ಯತ್ಯಾಸವಿರುತ್ತದೆ.

ಪ್ರಯೋಗಾಲಯದ ಇಲಿಗಳು ಸ್ಟೆರೈಲ್ ವಾತಾವ ರಣದಲ್ಲಿ ಬದುಕುವಂತವು. ಇಂತಹ ಶುದ್ಧ ಇಲಿಗಳ ಮೇಲೆ ಔಷಧಗಳನ್ನು ಪರೀಕ್ಷಿಸಲು ಸಾಧ್ಯ. ಆದರೆ ಔಷಧ ರಕ್ಷಿಸಲ್ಪಟ್ಟ ಇಲಿಗಳ ಮೇಲೆ ಕೆಲಸ ಮಾಡಿದರೆ, ಕಾಡಿನ ಊರಿನ ಇಲಿಗಳಲ್ಲಿಯೂ ಹಾಗೆ ಯೇ ಕೆಲಸ ಮಾಡುತ್ತದೆ ಎಂದು ಗ್ರಹಿಸುವುದು ತಪ್ಪಾಗುತ್ತದೆ. ಗರಡಿ ಮನೆಯಲ್ಲಿ ಪಳಗಿದವ ರನ್ನು ಗೆಲ್ಲುವುದು ಬೇರೆ, ಯಾ ವುದೇ ರೀತಿಯಲ್ಲೂ ತರಬೇತಿ ಇಲ್ಲದವರೊಂದಿಗೆ ಕುಸ್ತಿ ಆಡುವುದು ಬೇರೆ.

ಇತ್ತೀಚಿಗೆ ಯೂನಿವರ್ಸಿಟಿ ಆಫ್ ಟೆಕ್ಸಸ್ ಸೌಥ್‌ವೆಸ್ಟರ್ನ್ ಮೆಡಿಕಲ್ ಸೆನ್ಟರ್‌ನ ವಿಜ್ಞಾನಿಗಳಾದ ಲಿಲ್ಲಿ ತಾವೊ ಮತ್ತು ಟಿಫನಿ ರೀಸ್ ಪ್ರಕಟಿಸಿರುವ ಮೆಟಾನಲಿ ಸಿಸ್ ಪ್ರಕಾರ ಪ್ರಯೋಗಾಲಯದ ಇಲಿಗಳು ರೋಗಾಣುಗಳಿಂದ ತನ್ನನ್ನು ರಕ್ಷಿಸಿಕೊಳ್ಳುವ ಸಾಮಾರ್ಥ್ಯ ಪಡೆದಿರುವುದಿಲ್ಲ. ಸಾಧಾರಣ ರೋಗಾಣುಗಳು ಈ ಇಲಿಗಳ ರೋಗನಿರೋಧಕ ಶಕ್ತಿ ಯನ್ನು ಸುಲಭವಾಗಿ ಕೆಡುವಬ ಲ್ಲವು. ಅದೇ ಕಾಡಿನ ಇಲಿಗಳು ಇಂತಹ ರೋಗಾಣುಗಳ ವಿರುದ್ಧ ತಮ್ಮಲ್ಲಿ ತಕ್ಕ ನಿರೋಧಕ ಶಕ್ತಿಯನ್ನು ಹೊಂದಿರುತ್ತವೆ. ಪ್ರಯೋಗಾಲಯದ ಇಲಿಗಳಿಗೆ ಸ್ವಚ್ಛತೆಯೇ ರೋಗಾಣುಗಳಿಗಿಂತ ಮಾರಕ! ತನ್ನ ಕೃತಕ ವಾತಾವರಣ ಬಿಟ್ಟು ಬೇರೆ ಕಡೆ ಅವು ಬದುಕಲಾರವು.

ನಮ್ಮಲ್ಲಿ ಪಟ್ಟಿ ಮಾಡಿರುವ ಸುಮಾರು ೩೦,೦೦೦ ಕಾಯಿಲೆಗೆ ೩೦,೦೦೦ ಲಸಿಕೆ ಹಾಕಲು ಸಾಧ್ಯ ವಿಲ್ಲ. ದೇಹ ತನ್ನನ್ನು ಪ್ರಕೃತಿ ಯೊಂದಿಗೆ ಬೆರೆತು ಬೆಳಸಿಕೊ ಳ್ಳುವ ರೋಗನಿರೋಧಕ ಶಕ್ತಿ ಬಹುಮುಖ್ಯ. ಹಾಗೆಯೇ ಇಂದಿನ ಔಷಧ, ಲಸಿಕೆ ಪರೀಕ್ಷಿ ಸುವ ವಿಧಾನಗಳೂ ಬದಲಾಗ ಬೇಕಾಗಬಹುದು. ಇಲಿಗಳ ಮೇಲೆ ಔಷಧಗಳ ಯಶಸ್ಸು ಕಂಡ ಮೇಲೆ ಮನುಷ್ಯರ ಮೇಲೆ ಕೂಡ ಕ್ಲಿನಿಕಲ್ ಪ್ರಯೋಗ ಮಾಡುತ್ತಾರೆ. ಇಲ್ಲಿ ಹೆಚ್ಚಿನವರು ಗಂಡಸರೇ ಆಗಿರು ತ್ತಾರೆ. ಹೃದ್ರೋಗ, ಮಧುಮೇಹದಂಥ ಕಾಯಿಲೆಗೆ ಗಂಡು ಹೆಣ್ಣು ಒಂದೇ ಎಂದು ಊಹಿಸಿ ಪ್ರಯೋಗ ಮಾಡುವುದಾಗಿದೆ. ಮಹಿಳೆಯಯರ ದೇಹ ಪ್ರಕೃತಿ ಮತ್ತು ಹಾರ್ಮೋನ್‌ಗಳ ವ್ಯತ್ಯಾಸ ಕಾರಣಗಳಿಂದ ಅವರ ಮೇಲೆ ಪರೀಕ್ಷಿಸುವುದು ಕಡಿಮೆ. ಅಲ್ಲದೇ ಅನೇಕ ಔಷದಗಳು ಲಿಂಗ ತಾರತಮ್ಯ ವಿಲ್ಲದೇ ಪರೀಕ್ಷಿಸುವುದು ಮತ್ತು ಬಳಸುವುದರ ಬಗ್ಗೆ ಇತ್ತೀಚಿಗೆ ಬಹಳಷ್ಟು ತಕರಾರುಗಳಿವೆ.

# ಬೆಳಗಾವಿಯಲ್ಲಿ ಆಲಿಕಲ್ಲು ಸಹಿತ ಧಾರಾಕಾರ ಮಳೆ




**ಬೆಳಗಾವಿ ವಾರ್ತೆ**

**ಬೆಳಗಾವಿ:** ಬೆಳಗಾವಿ ನಗರ ಸೇರಿದಂತೆ ಜಿಲ್ಲೆಯ ಕೆಲವು ಕಡೆ ಮಂಗಳವಾರ ಮಧ್ಯಾಹ್ನ ಒಂದು ತಾಸು ಬಿರುಗಾಳಿ ಸಹಿತ ಧಾರಾಕಾರ ಮಳೆ ಸುರಿಯಿತು. ಉರಿಬಿಸಿಲು ಮರೆಯಾಗಿ ಏಕಾಏಕಿ ಮಳೆ ಸುರಿದಿದ್ದರಿಂದ ಬೈಕುಗಳಲ್ಲಿ ಓಡಾಡುವ ಜನ, ಬೀದಿಬದಿ ವ್ಯಾಪಾರಿಗಳು ಪರದಾಡಿದರು.

ಬೆಳಿಗ್ಗೆ 11ರಿಂದಲೇ ರಣ ಬಿಸಿಲಿತ್ತು. ಮಧ್ಯಾಹ್ನ 3.30ರ ಸುಮಾರಿಗೆ ಏಕಾಏಕಿ ಗುಡುಗು–ಸಿಡಿಲು–ಬಿರುಗಾಳಿ ಸಹಿತ ಮಳೆ ಶುರುವಾಯಿತು. ಯುಗಾದಿ ಹಾಗೂ ರಂಜಾನ್ ಹಬ್ಬಗಳ ಹಿನ್ನೆಲೆಯಲ್ಲಿ ನಗರದ ಬೀದಿ ಬದಿಗಳಲ್ಲಿ ಅಪಾರ ಸಂಖ್ಯೆಯ ಟೆಂಟ್ ಮಳಿಗೆಗಳನ್ನು ಹಾಕಲಾಗಿದೆ. ಏಕಾಏಕಿ ಮಳೆ ರಭಸವಾಗಿ ಸುರಿದ ಕಾರಣ ಆಹಾರ ತಿನಿಸುಗಳು, ಕಾಳು ವ್ಯಾಪಾರಿಗಳು ತಮ್ಮ ವಸ್ತುಗಳನ್ನು ಮಳೆಯಿಂದ ರಕ್ಷಿಸಿಕೊಳ್ಳಲು ಹರಸಾಹಸಪಟ್ಟರು.

ಮಳೆಯೊಂದಿಗೆ ಆಲಿಕಲ್ಲುಗಳೂ ಬಿದ್ದವು. ಉದ್ಯಾನ, ರಸ್ತೆ, ಚರಂಡಿಗಳು ಆಲಿಕಲ್ಲುಗಳಿಂದ ಆವೃತವಾಗಿದ್ದವು. ಕಣ್ಣು ಹಾಯಿಸಿದಲ್ಲೆಲ್ಲಾ ಆಲಿಕಲ್ಲುಗಳೇ ಕಾಣಿಸಿದವು. ಜನರು ಆಲಿಕಲ್ಲುಗಳನ್ನು ಕಂಡ ಜನ ಬೆರಗಾದರು. ಕೈಯಲ್ಲಿ ಆಲಿಕಲ್ಲು ಹಿಡಿದು ಸಂಭ್ರಮಿಸುತ್ತಿರುವುದು ಸಾಮಾನ್ಯವಾಗಿತ್ತು.

ಇನ್ನು ರಂಜಾನ್ ಅಂಗವಾಗಿ ವೀರಭದ್ರ ನಗರದಲ್ಲಿ ಇಫ್ತಾರ್‌ಕೂಟಕ್ಕೆ ನಿರ್ಮಿಸಿದ್ದ ಶಾಮಿಯಾನ ಹಾಗೂ ಬಟ್ಟೆ ಮಳಿಗೆಗಳು ಮಳೆ□ಗಾಳಿಯಿಂದ ಮುರಿದುಬಿದ್ದವು. ನಿರ್ಮಲ್ ನಗರದಲ್ಲಿ ರಾಷ್ಟ್ರೀಯ ಹೆದ್ದಾರಿಗೆ ನಿರ್ಮಿಸಿದ ಅಂಡರ್‌ಪಾಸ್‌ನಲ್ಲಿ ನೀರು ಕಟ್ಟಿಕೊಂಡು ರಸ್ತೆ ಕೆರೆಯಾಗಿ ಮಾರ್ಪಟ್ಟಿತು. ಇದರಿಂದ ಸಾರ್ವಜನಿಕರು ಪರದಾಡಿದರು.

ಜಿಲ್ಲಾ ಕ್ರೀಡಾಂಗಣ ಪಕ್ಕದಲ್ಲಿ ಭಾರಿ ಅನಾಹುತ ತಪ್ಪಿದೆ. ಎರಡು ಅಂತಸ್ತಿನ ಮೇಲಿನದ್ದ ತಗಡಿನ ಶೆಡ್ಡು ಬಿರುಗಾಳಿಸಹಿತ ಮಳೆಯಿಂದ ಧರೆಗೆ ಉರುಳಿದೆ. ಕೆಳಗಿದ್ದ 10ಕ್ಕೂ ಹೆಚ್ಚು ವಾಹನಗಳಿಗೆ ಹಾನಿಯಾಗಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಎರಡು ಕ್ರೇನ್ ಬಳಸಿ ಅಲ್ಲಿನ ಸಿಬ್ಬಂದಿ ಶೆಡ್ಡು ತೆರವುಗೊಳಿಸಿದರು. ಎಪಿಎಂಸಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ಅದೇ ರೀತಿ ರಾಮತೀರ್ಥ ನಗರ, ಸದಾಶಿವ ನಗರ, ಹನುಮಾನ್ ನಗರ, ಬಾಕ್ಸೈಟ್ ರಸ್ತೆ, ಪಾರ್ವತಿ ನಗರ, ಗಾಂಧಿ ನಗರ, ಮಾಳ ಮಾರುತಿ, ಆಂಜನೇಯ ನಗರ, ವಡಗಾವಿ, ಶಹಾಪುರ, ಮಹಾಂತೇಶ ನಗರದಲ್ಲಿರುವ ವಿಶಾಲವಾದ ರಸ್ತೆಗಳಲ್ಲಿ ಅಪಾರ ಪ್ರಮಾಣದ ನೀರು ಹರಿಯಿತು. ಸಂಜೆ 5ರ ನಂತರ ಮೋಡ ಮರೆಯಾಗಿ ಮತ್ತೆ ಇಳಿ ಬಿಸಿಲಿನ ದರ್ಶನ ಆಗುತ್ತಿದ್ದಂತೆ ಜನರು ನಿಟ್ಟುಸಿರು ಬಿಟ್ಟರು. ರಾಮದುರ್ಗ, ಗೋಕಾಕ ಹಾಗೂ ಚಿಕ್ಕೋಡಿ ಸೇರಿ ಮತ್ತಿತರ ಕಡೆ ಸಾಧಾರಣ ಮಳೆಯಾಗಿರುವ ವರದಿ ಆಗಿದೆ.

# ಯುಗಾದಿ ಹಬ್ಬದ ನಿಮಿತ್ತ ಹಿಂದೂ ಜನಜಾಗೃತಿ ಸಮಿತಿ ವತಿಯಿಂದ ಗೋಕಾಕಿನ ವಿವಿಧಡೆ ಬ್ರಹ್ಮಧ್ವಜ ಸ್ಥಾಪನೆ ಹಾಗೂ ರಾಮರಾಜ್ಯಕ್ಕಾಗಿ ಪ್ರತಿಜ್ಞೆ!

**ಬೆಳಗಾವಿ ವಾರ್ತೆ**

**ಗೋಕಾಕ :** ಹಿಂದೂ ಜನಜಾಗೃತಿ ಸಮಿತಿ ವತಿಯಿಂದ ಯುಗಾದಿ ಹಬ್ಬದ ನಿಮಿತ್ತ ಗೋಕಾಕಿನ ಶ್ರೀ ಹನುಮಾನ ಮಂದಿರದಲ್ಲಿ ಮತ್ತು ಹಿಂದೂಗಳು ಮನೆ ಮನೆಗಳಲ್ಲಿ ಸಾಮೂಹಿಕ ಬ್ರಹ್ಮಧ್ವಜದ ಸ್ಥಾಪನೆ ಮಾಡಿ ರಾಮರಾಜ್ಯದ ಸ್ಥಾಪನೆಗಾಗಿ ಪ್ರತಿಜ್ಞೆಯನ್ನು ಮಾಡಲಾಯಿತು.

ಈ ಸಂದರ್ಭದಲ್ಲಿ ಧರ್ಮಪ್ರೇಮಿಗಳು ಹಾಗೂ ಹಿಂದೂ ಜನಜಾಗೃತಿ ಸಮಿತಿಯ ಕಾರ್ಯಕರ್ತರು ಬ್ರಹ್ಮಧ್ವಜವನ್ನು ಏರಿಸಿ, ಸಮಾಜದಲ್ಲಿ ಧರ್ಮ, ಸತ್ತ್ವವೃತ್ತಿ ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ಬಲಪಡಿಸುವ ಸಂಕಲ್ಪ ಮಾಡಿದರು. ರಾಮರಾಜ್ಯ ಸ್ಥಾಪನೆಗೆ ಅಗತ್ಯವಾದ ಸತ್ಸಂಕಲ್ಪಗಳನ್ನು ಪಾಲಿಸುವುದಾಗಿ ಪ್ರತಿಜ್ಞೆ ಸ್ವೀಕರಿಸಲಾಯಿತು. ಯುಗಾದಿ ಅಂದರೆ "ಯುಗ + ಆದಿ" ಎಂಬ ಪದಗಳಿಂದ ರೂಪುಗೊಂಡಿದ್ದು, ಇದು ಹೊಸ ಯುಗದ ಪ್ರಾರಂಭವನ್ನು ಸೂಚಿಸುತ್ತದೆ. ಚೈತ್ರ ಶುಕ್ಲ ಪ್ರತಿಪದೆಯಂದು ಯುಗಾದಿ ಹಬ್ಬವನ್ನು ಆಚರಿಸಲಾಗುತ್ತದೆ.

ಪುರಾಣಗಳ ಪ್ರಕಾರ, ಈ ದಿನ ಬ್ರಹ್ಮದೇವನು ಸೃಷ್ಟಿ ಕಾರ್ಯವನ್ನು ಪ್ರಾರಂಭಿಸಿದನು. ಆದ್ದರಿಂದ ಈ ದಿನವನ್ನು ಸಂವತ್ಸರಾರಂಭದ ದಿನವಾಗಿ ಪರಿಗಣಿಸಲಾಗುತ್ತದೆ. ಯುಗಾದಿಯು ಕೇವಲ ಹಬ್ಬವಲ್ಲ, ಅದು ಜೀವನದಲ್ಲಿ ಹೊಸ ಆಶೆಗಳು, ಹೊಸ ಸಂಕಲ್ಪಗಳು ಮತ್ತು ಸಕಾರಾತ್ಮ ಕತೆಯನ್ನು ಆರಂಭಿಸುವ ದಿನವಾಗಿದೆ. ವಿಜಯ, ಸೃಷ್ಟಿ ಮತ್ತು ಧರ್ಮದ ಸಂಕೇತವಾಗಿ ಬ್ರಹ್ಮಧ್ವಜವನ್ನು ಏರಿಸಲಾಗುತ್ತದೆ.

ಈ ಕಾರ್ಯಕ್ರಮದ ಮೂಲಕ



ಸಮಾಜದಲ್ಲಿ ಧಾರ್ಮಿಕ ಜಾಗೃತಿ, ಏಕತೆ ಮತ್ತು ಸಂಸ್ಕೃತಿಯ ಮಹತ್ವವನ್ನು ಒತ್ತಿ ಹೇಳಲಾಯಿತು. ಯುವಜನತೆ ಧರ್ಮದ ಮಾರ್ಗದಲ್ಲಿ ಸಾಗುವಂತೆ ಪ್ರೇರೇಪಿಸಲಾಯಿತು.

ಹಿಂದೂ ಜನಜಾಗೃತಿ ಸಮಿತಿಯು ಈ ಉಪಕ್ರಮವು ಯುಗಾದಿಯು ಧಾರ್ಮಿಕ ಮತ್ತು ಸಾಂಸ್ಕೃತಿ ಮಹತ್ವವನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಮಹತ್ತರ ಪಾತ್ರವಹಿಸಿದೆ.

# ಡಾ.ರಾಮಕೃಷ್ಣ ಶಿರೂರು ಅವರಿಗೆ ಕವಿ ಕಾವ್ಯ ವಿಭೂಷಣ ಪ್ರಶಸ್ತಿ ಪ್ರದಾನ

**ಬೆಳಗಾವಿ ವಾರ್ತೆ**

**ದಕ್ಷಿಣ ಕನ್ನಡ:** ಜಿಲ್ಲೆಯ ಮೂಡುಬಿದಿರೆ ತಾಲೂಕಿನ ಹೋಲಿ ರೋಸರಿ ಪ್ರೌಢಶಾಲೆಯ ಕನ್ನಡ ಅಧ್ಯಾಪಕ ಡಾ. ರಾಮಕೃಷ್ಣ ಶಿರೂರು ಅವರಿಗೆ ಕೇರಳ ರಾಜ್ಯದ ಕಾಸರಗೋಡಿನಲ್ಲಿ ಕವಿ ಕಾವ್ಯ ವಿಭೂಷಣ ರಾಷ್ಟ್ರ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಕೇರಳ ರಾಜ್ಯದ ಕಾಸರಗೋಡಿನ ಕನ್ನಡ ಭವನದಲ್ಲಿ ನಡೆದ ಕೇರಳ ಕರ್ನಾ ಟಕ ಚುಟುಕು ಸಾಹಿತ್ಯ ಸಮ್ಮೇಳನದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಈ ಸಮಾರಂಭದಲ್ಲಿ ಎಡೆ ನೀರು ಮಠಾಧೀಶರಾದ ಶ್ರೀ ಶ್ರೀ ಸಚ್ಚಿದಾನಂದ ಶ್ರೀಪಾದರು, ಗದಗ ಜಿಲ್ಲೆಯ ಲಕ್ಷ್ಮೇಶ್ವರ ತಾಲೂಕಿನ ಗೋನಾಳದ ಶ್ರೀ ಶ್ರೀ ರಮೇಶ ಸ್ವಾಮೀಜಿ, ಕಾಸರಗೋಡು ಕನ್ನಡ ಭವನದ ರೂವಾರಿ ಡಾ. ವಾಮನ ರಾವ್ ಬೇಕಲ್, ಸಂಧ್ಯಾ ರಾಣಿ ಟೀಚರ್, ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದ ಡಾ. ಕೃಷ್ಣಪ್ರಸಾದ್ ಕೂಡ್ಲು,




ಕೇರಳ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ಗೌರವಾಧ್ಯಕ್ಷರಾದ ಶ್ರೀ ಪ್ರದೀಪ್ ಕುಮಾರ ಕಲ್ಕೂರ, ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷ ಡಾ. ವೆಂಕಟರಮಣ ಹೊಳ್ಳ, ಕನ್ನಡ ಹೋರಾಟಗಾರ, ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯ ಸಂಚಾಲಕರಾದ ಶ್ರೀ ನಂ. ವಿಜಯಕುಮಾರ್, ಕವಿಗಳಾಗಿರುವ ಡಾ.ಸುರೇಶ ನೆಗಳಗುಳಿ, ಡಾ. ಕೊಳಚಪ್ಪೆ ಗೋವಿಂದ ಭಟ್, ಕನ್ನಡ ಭವನದ ಕಾರ್ಯದರ್ಶಿ ಶ್ರೀ ವಸಂತ ಕೆರೆಮನೆ, ಹಿರಿಯ ಕವಿ ಶ್ರೀ ಜಯಾನಂದ ಪೆರಾಜೆ, ಕಾಸರಗೋಡು ಕನ್ನಡ ಭವನದ ಗದಗ ಜಿಲ್ಲಾ ಘಟಕದ ಅಧ್ಯಕ್ಷರಾದ ಡಾ. ಸಂಗಮೇಶ ತಮ್ಮನ ಗೌಡರ್, ಉಪಾಧ್ಯಕ್ಷರಾದ ಶ್ರೀಮತಿ ರತ್ನ ಸಿ.ಬದಿ, ಬೆಳಗಾವಿಯ ಪತ್ರಕರ್ತ ಶ್ರೀ ಸಿ. ವೈ. ಟಿಮೆಣಸಿನಕಾಯಿ, ಡಾ. ಶಾಂತ ಪುತ್ತೂರು ಮುಂತಾದವರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಅದ್ದೂರಿ ಸಮಾರಂಭದಲ್ಲಿ ವೈಭವದಿಂದ ಪ್ರಶಸ್ತಿ ಪ್ರದಾನ ಮಾಡಲಾಯಿತು.

# ಡಿಮ್ಹಾನ್ಸ್ ಸಂಸ್ಥೆಯಲ್ಲಿ ವಿಶ್ವ ಸಮಾಜ ಕಾರ್ಯ ದಿನಾಚರಣೆ



ಧಾರವಾಡ: ಸಮಾಜದ ಅಭಿವೃದ್ಧಿಯಲ್ಲಿ ಸಾಮಾಜಿಕ ಕಾರ್ಯಕರ್ತರ ಸೇವೆ ಅತ್ಯಮೂಲ್ಯವಾಗಿದ್ದು, ಪ್ರಸ್ತುತ ದಿನಮಾನಗಳಲ್ಲಿ ಏರಿಕೆಯಾಗುತ್ತಿರುವ ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ಸ್ಪಂದಿಸುವಂತಹ ಸಮಾಜಕಾರ್ಯಕರ್ತರ ಸೇವೆ ಜನರಿಗೆ ತುಂಬಾ ಸಹಾಯಕವಾಗುತ್ತಿದೆ ಎಂದು ಡಿಮ್ಹಾನ್ಸ್ ಸಂಸ್ಥೆಯ ನಿರ್ದೇಶಕ ಡಾ.ಅರುಣಕುಮಾರ ಸಿ. ಅವರು ಹೇಳಿದರು.

ಅವರು ನಿನ್ನೆ (ಮಾ.17) ಬೆಳಿಗ್ಗೆ ಧಾರವಾಡ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ಸಂಸ್ಥೆ (ಡಿಮ್ಹಾನ್ಸ್) ಯಲ್ಲಿ ವಿಶ್ವ ಸಮಾಜ ಕಾರ್ಯ ದಿನಾಚರಣೆ–2026 ರ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು.

ಸಮಾಜದ ಸಮಸ್ಯೆಗಳಿಗೆ ಸಮಾಜ ಕಾರ್ಯಕರ್ತರು ವೃತ್ತಿ ನೈಪುಣ್ಯತೆಯ ಆಧಾರದ ಮೇಲೆ ಹಲವಾರು ಸಮಸ್ಯೆಗಳನ್ನು ಪರಿಹರಿಸುತ್ತಾ ಬಂದಿದ್ದಾರೆ. ಸಮಾಜಕಾರ್ಯ ವೃತ್ತಿಯ ಕ್ಷೇತ್ರದಲ್ಲಿ ಅನೇಕ ಮಹನೀಯರು ಅಮೂಲ್ಯವಾದ ಸೇವೆಯನ್ನು ನೀಡಿದ್ದಾರೆ. ಇಂತಹ ಅನೇಕ ಮಹನೀಯರಿಗೆ ವಿಶ್ವ ಸಮಾಜಕಾರ್ಯ ದಿನಾಚರಣೆಯ ದಿನದ ನಿಮಿತ್ತ ವಿಶೇಷ ವಾದ ಅಭಿನಂದನೆಗಳು ಎಂದು ತಿಳಿಸಿದರು.

ಈ ವರ್ಷದ ಧ್ಯೇಯವಾಕ್ಯವು, ವಿಭಜಿತ ಸಮುದಾಯಗಳನ್ನು ಒಗ್ಗೂಡಿಸುವ, ಬೆಳೆಸುವ ಮತ್ತು ನಂಬಿಕೆಯನ್ನು ನಿರ್ಮಿಸುವ ಹಾಗೂ ಆಫ್ರಿಕನ್ ಹರಂಬೀ ತತ್ವಶಾಸ್ತ್ರದ ನೆಲೆಗಟ್ಟಿನಲ್ಲಿ ಸುಸ್ಥಿರ, ಅಂತರ್ಗತ ಭವಿಷ್ಯವನ್ನು ಉತ್ತೇಜಿಸುವಲ್ಲಿ ಸಾಮಾಜಿಕ ಕಾರ್ಯಕರ್ತರ ಪ್ರಮುಖ ಪಾತ್ರವನ್ನು ಎತ್ತಿ ತೋರಿಸುತ್ತದೆ ಎಂದು ತಿಳಿಸಿದರು.

ವಿಭಜಿತ ಸಮಾಜವನ್ನು ಒಟ್ಟುಗೂಡಿಸಲು ಸಹಭಾಗಿತ್ವದ ಮೂಲಕ ಭರವಸೆ ಮತ್ತು ಸಾಮರಸ್ಯವನ್ನು ನಿರ್ಮಿಸಿ ನಾವು ಒಟ್ಟಾಗಿ ಮುಂದೆ ಸಾಗಿದಾಗ ಯಾವುದೇ ಸವಾಲು ಮತ್ತು ಸಮಸ್ಯೆ ತುಂಬಾ ದೊಡ್ಡದಾಗುವುದಿಲ್ಲ, ಇಂತಹ ಕೆಲಸದಲ್ಲಿ ನಾವು ಒಟ್ಟಾಗಿ ಕೆಲಸ ಮಾಡುವುದು ನಮಗೆ ಒಂದು ನೆನಪಿನೊಂದಿಗೆ ಸವಾಲನ್ನು ನೀಡುತ್ತದೆ ಎಂಬುದಾಗಿದೆ. ಸಮಾಜಕಾರ್ಯ ಶಿಕ್ಷಣವು ಕೇವಲ ಜ್ಞಾನವನ್ನು ನೀಡುವುದು ಅಷ್ಟೇ ಅಲ್ಲ, ಸಮಾಜದ ಹೃದಯವನ್ನು ರೂಪಿಸುವ ಕಾರ್ಯವು ಆಗಿದೆ ಎಂಬುದನ್ನು ನೆನಪಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಮಾನಸಿಕ ಆರೋಗ್ಯ ಕ್ಷೇತ್ರದಲ್ಲಿ ಮನೋವೈದ್ಯಕೀಯ ಸಮಾಜ ಕಾರ್ಯಕರ್ತರ ಸೇವೆ ಪ್ರಮುಖವಾಗಿದೆ. ಮನೋವೈದ್ಯಕೀಯ ಸಮಾಜಕಾರ್ಯ ಶಾಖೆಯು ಮಾನಸಿಕ ಆರೋಗ್ಯ ಕ್ಷೇತ್ರದಲ್ಲಿ ಗಣನೀಯ ಮಹತ್ವವನ್ನು ಪಡೆದುಕೊಳ್ಳುತ್ತಿದೆ ಎಂದು ಅಭಿಪ್ರಾಯ ಪಟ್ಟರು. ಡಿಮ್ಹಾನ್ಸ್ ಸಂಸ್ಥೆಯಲ್ಲಿ ಮನೋವೈದ್ಯಕೀಯ ಸಮಾಜಕಾರ್ಯ ವಿಭಾಗದವತಿಯಿಂದ ಮಾಡಿದ ಕಾರ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಡಿಮ್ಹಾನ್ಸ್ ಸಂಸ್ಥೆಯ ಮುಖ್ಯ ಆಡಳಿತ ಅಧಿಕಾರಿ ಮೇಜರ್ ಸಿದ್ದಲಿಂಗಯ್ಯ ಹಿರೇಮಠ, ವೈದ್ಯಕೀಯ ಅಧೀಕ್ಷಕ ಡಾ.ರಾಘವೇಂದ್ರ ನಾಯಕ್ ಅವರು ಮಾತನಾಡಿದರು.

ವೇದಿಕೆಯಲ್ಲಿ ಡಿಮ್ಹಾನ್ಸ್ ಸಂಸ್ಥೆಯ ಸೈಕಿಯಾಟ್ರಿ ವಿಭಾಗದ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥ ಡಾ.ರಂಗನಾಥ ಕುಲಕರ್ಣಿ ಮತ್ತು ಮನೋವೈದ್ಯಕೀಯ ಸಮಾಜ ಕಾರ್ಯ ವಿಭಾಗದ ಪ್ರಾಧ್ಯಾಪಕ ಹಾಗೂ ವಿಭಾಗದ ಮುಖ್ಯಸ್ಥ ಡಾ.ಸತೀಶ್ ಅವರು ಉಪಸ್ಥಿತರಿದ್ದರು.

ವಿಶ್ವ ಸಮಾಜ ಕಾರ್ಯ ದಿನಾಚರಣೆ–2026 ಅಂಗವಾಗಿ ಹಮ್ಮಿಕೊಂಡ ಈ ಕಾರ್ಯಕ್ರಮದಲ್ಲಿ ಮನೋವೈದ್ಯಕೀಯ ಸಮಾಜ ಕಾರ್ಯವಿಭಾಗದ ಸಿಬ್ಬಂದಿಗಳಾದ ಡಾ.ಅಶೋಕ ಎಸ್.ಕೋರಿ ಹಾಗೂ ಡಾ.ಬಿ.ಜಿ ಅನಂತರಾಮು ಅವರು ಪಿ.ಹೆಚ್.ಡಿ ಪದವಿಯನ್ನು ಪಡೆದಿದ್ದಾಕ್ಕಾಗಿ ಡಿಮ್ಹಾನ್ಸ್ ಸಂಸ್ಥೆಯ ಸಿಬ್ಬಂದಿಗಳು ಸೇರಿ ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಮನೋವೈದ್ಯಕೀಯ ಸಮಾಜ ಕಾರ್ಯಕರ್ತರಾದ ಓಬಾ ನಾಯ್ಕ ಪಿ, ರಮೇಶ ತಿಮ್ಮಾಪೂರ, ಪ್ರಶಾಂತ ಪಾಟೀಲ, ಶ್ರೀದೇವಿ ಬಿರಾದಾರ, ಟಿಲಿಮಾನಸ ತಂಡದ ಎಲ್ಲಾ ಸಾಮಾಜಿಕ ಕಾರ್ಯಕರ್ತರು ಮತ್ತು ಮನಶಾಸ್ತ್ರಜ್ಞರು, ಮನೋವೈದ್ಯರಾದ ಡಾ.ರಾಘವೇಂದ್ರ ಪಾಟೀಲ, ಎಂಫೀಲ್ ಪ್ರಶೀಕ್ಷಣಾರ್ಥಿಗಳು ಉಪಸ್ಥಿತರಿದ್ದರು.

ಅಶೋಕ ಹಾರೋಡಗಿ ಪ್ರಾರ್ಥಸಿದರು. ಆಶಾ ಮೇಟಿ ಕಾರ್ಯಕ್ರಮವನ್ನು ನಿರೂಪಿಸಿದರು. ಅ

# ಕಳ್ಳತನ ಆರೋಪಿ ಬಂಧನ



ಲಕ್ಷೇಶ್ವರ: ಲಕ್ಷೇಶ್ವರ ಪೊಲೀಸ್ ಠಾಣಾ ವ್ಯಾಪ್ತಿಯ ಶಿಗ್ಲಿ ಗ್ರಾಮದಲ್ಲಿ ಕಳೆದ ಎರಡು ತಿಂಗಳ ಹಿಂದೆ ನಡೆದಿದ್ದ ಮನೆಗಳ್ಳತನವನ್ನು ಪತ್ತೆ ಹಚ್ಚಿ ಆರೋಪಿಯನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಬಂಧಿತ ಆರೋಪಿಚಮನಸಾಬ. ಸಿ. ಪಾಟೀಲ ಈತನಿಂದ ಕಳುವು ಮಾಡಿದ್ದ ಬೆಳ್ಳಿ ಬಂಗಾರದ 22 ಗ್ರಾಂ ಆಭರಣಗಳು ಹಾಗೂ ನಗದು ಸೇರಿ 2,60,000 ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಇದೇ ಆರೋಪಿ ಶಿರಹಟ್ಟಿ ಪೊಲೀಸ್ ಠಾಣಾ ವ್ಯಾಪ್ತಿಯ ಬೆಳ್ಳಟ್ಟಿಯಲ್ಲಿಯೂ ಕಳುವು ಮಾಡಿದ್ದು ಅಲ್ಲಿನ ವಸ್ತುಗಳನ್ನು ಸಹ ವಶಪಡಿಸಿಕೊಳ್ಳಲಾಗಿದೆ.

ಆರೋಪಿಯನ್ನು ಬಂಧಿಸಲು ಎಸ್ ಪಿ ರೋಹನ್ ಜಗದೀಶ್ ಡಿಎಸ್ಪಿ ಮುರ್ತುಜಾ ಖಾದ್ರಿಯವರ ಮಾರ್ಗದರ್ಶನದಲ್ಲಿ ಸಿಪಿಐ ಬಿವಿ ನ್ಯಾಮಗೌಡ ಅವರ ನೇತೃತ್ವದಲ್ಲಿ ಪಿಎಸ್‌ಐಗಳಾದ ನಾಗರಾಜ್ ಗಡದ ಮತ್ತು ಜಿಕೆ ರಾಠೋಡ್ ಅವರನ್ನು ಒಳಗೊಂಡ ತಂಡವನ್ನು ರಚಿಸಲಾಗಿತ್ತು.

ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿರುವ ತಂಡವನ್ನು ಎಸ್ಪಿ ಮತ್ತು ಡಿಎಸ್ಪಿ ಅವರು ಅಭಿನಂದಿಸಿದ್ದಾರೆ.

# ಬೇಸಿಗೆ ಮಕ್ಕಳ ಚಿತ್ರಕಲಾ ಶಿಬಿರ–2026

ಧಾರವಾಡ: ಚಿತ್ರಕಲಾ ಶಿಲ್ಪಿ ಶ್ರೀ ಡಿ.ವ್ಹಿ. ಹಾಲಭಾವಿ ರಾಷ್ಟ್ರೀಯ ಸ್ಮಾರಕ (ರಿ) ಟ್ರಸ್ಟ್ ವತಿಯಿಂದ ಏಪ್ರಿಲ್ 06 ರಿಂದ ಮೇ 06 2026 ರವರೆಗೆ ಬೇಸಿಗೆ ಮಕ್ಕಳ ಚಿತ್ರಕಲಾ ಶಿಬಿರ–2026 ವನ್ನು ಪ್ರಾರಂಭಿಸಲಾಗುತ್ತಿದೆ. 07 ವರ್ಷದಿಂದ 10 ವರ್ಷ ವಯೋಮಾನದ ಹಾಗೂ 11 ವರ್ಷದಿಂದ 15 ವರ್ಷ ವಯೋಮಾನದ ಆಸಕ್ತ ವಿದ್ಯಾರ್ಥಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಾಲೇಜು ರಸ್ತೆ, ಧಾರವಾಡ–580001 ಈ ಕಚೇರಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಚಿತ್ರಕಲಾ ಶಿಲ್ಪಿ ಶ್ರೀ ಡಿ.ವ್ಹಿ. ಹಾಲಭಾವಿ ರಾಷ್ಟ್ರೀಯ ಸ್ಮಾರಕ (ರಿ) ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಚೇರಿಗೆ ಅಥವಾ ದೂರವಾಣಿ ಸಂಖ್ಯೆ:0836–2442909, 9742982065 ಗೆ ಸಂಪರ್ಕಿಸಬಹುದಾಗಿದೆ.

ಅರ್ಜಿ ನಮೂನೆಯನ್ನು ಕಚೇರಿಯ ವೇಳೆಯಲ್ಲಿ ಪಡೆಯಬಹುದು. ಸದರಿ ಶಿಬಿರವನ್ನು ಸರ್ಕಾರಿ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಏರ್ಪಡಿಸಲಾಗುತ್ತಿದೆ. ಚಿತ್ರಕಲೆಯಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳು ಬೇಸಿಗೆ ಮಕ್ಕಳ ಚಿತ್ರಕಲಾ ಶಿಬಿರ–2026 ರ ಸದುಪಯೋಗವನ್ನು ಪಡೆದುಕೊಳ್ಳಬಹುದು ಎಂದು ಚಿತ್ರಕಲಾ ಶಿಲ್ಪಿ ಶ್ರೀ ಡಿ.ವ್ಹಿ.ಹಾಲಭಾವಿ ರಾಷ್ಟ್ರೀಯ ಸ್ಮಾರಕ (ರಿ) ಟ್ರಸ್ಟ್‌ನ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಾಳಸಂತೆಯಲ್ಲಿ ಗೃಹಬಳಕೆ ಗ್ಯಾಸ್ ಸಿಲಿಂಡರ್ ಮಾರಾಟ

ಹುಬ್ಬಳ್ಳಿ: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮವಾಗಿ ವಾಣಿಜ್ಯ ಬಳಕೆಯ ಗ್ಯಾಸ್ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯವಾಗಿದ್ದು, ಅದನ್ನೇ ಬಂಡವಾಳ ಮಾಡಿಕೊಂಡಿರುವ ಖದೀಮರು ಗೃಹ ಬಳಕೆಯ ಗ್ಯಾಸ್ ಸಿಲಿಂಡರ್‌ಗಳನ್ನೇ ಕಾಳಸಂತೆ ಯಲ್ಲಿ ಮಾರಾಟ ಮಾಡುತ್ತಿದ್ದಾರೆ. ಇದರ ಬೆನ್ನಲ್ಲೇ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ದಾಳಿ ನಡೆಸಿರುವ ಅಧಿಕಾರಿಗಳು ಈವರೆಗೆ 677 ಸಿಲಿಂಡರ್‌ಗಳನ್ನು ಸೀಜ್ ಮಾಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ರಾಜ್ಯ ಸರ್ಕಾರ ಎಸ್ಮಾ ಕಾಯ್ದೆ ಜಾರಿಮಾಡಿದ ಬೆನ್ನಲ್ಲೇ ಗೃಹ ಬಳಕೆ ಗ್ಯಾಸ್ ಸಿಲಿಂಡರ್‌ಗಳನ್ನು ಕೇವಲ ಗ್ರಾಹಕರಿಗೆ ನೀಡಬೇಕು ಅದೂ ಬಿಲ್ ಸಮೇತ ಎಂದು ಆದೇಶ ಹೊರಡಿಸಿದೆ. ಇದಕ್ಕೂ ಅಡ್ಡದಾರಿ ಹುಡುಕಿಕೊಂಡಿದ್ದರಿಂದ ಜಿಲ್ಲಾವಾರು ಆಹಾರ ಇಲಾಖೆಯ ಅಧಿಕಾರಿಗಳು ತಂಡ ಕಟ್ಟಿಕೊಂಡು ತಪಾಸಣೆ ಆರಂಭಿಸಿದ್ದಾರೆ. ಈ ವೇಳೆ ಕೆಲ ಹೋಟೆಲ್‌ಗಳು ಗೃಹ ಬಳಕೆಯ ಗ್ಯಾಸ್ ಸಿಲಿಂಡರ್‌ಗಳನ್ನು ರಾಜಾರೋಷವಾಗಿ ಬಳಸುತ್ತಿರುವುದು ಬೆಳಕಿಗೆ ಬಂದಿದೆ. **ಎಲ್ಲೆಲ್ಲಿ ಎಷ್ಟೆಷ್ಟು ಜಪ್ತಿ?:** ಬಾಗಲಕೋಟೆ ಜಿಲೆಯಲ್ಲಿ 44, ಬೆಂಗಳೂರು ದಕ್ಷಿಣ 11, ಬೆಂಗಳೂರು ಉತ್ತರ 3, ಬೆಂಗಳೂರು ಪಶ್ಚಿಮ 4, ಬೆಂಗಳೂರು ಶಹರ 284, ಬೆಂಗಳೂರು ಗ್ರಾಮೀಣ 115, ಬೆಳಗಾವಿ ಜಿಲ್ಲೆಯಲ್ಲಿ 17, ಬೀದರ್ 105, ಚಿಕ್ಕಬಳ್ಳಾಪುರ 30, ಚಿಕ್ಕಮಗಳೂರು 3, ಚಿತ್ರದುರ್ಗ 12, ಧಾರವಾಡ 27 ಹಾಗೂ ದಾವಣಗೆರೆ ಜಿಲ್ಲೆಯ 33 ಕಡೆಗಳಲ್ಲಿ ದಾಳಿ ನಡೆಸಿ ಹೋಟೆಲ್‌ಗಳಲ್ಲಿ ಅಕ್ರಮವಾಗಿ ಬಳಸುತ್ತಿದ್ದ ಮತ್ತು ದಾಸ್ತಾನು ಇಡಲಾಗಿದ್ದ ಗೃಹ ಬಳಕೆಯ ಗ್ಯಾಸ್ ಸಿಲಿಂಡರ್‌ಗಳನ್ನು ವಶಕ್ಕೆ ಪಡೆದು, ಹೋಟೆಲ್ ಮಾಲೀಕರ ಮೇಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ನಮ್ಮ ವಿಜಿಲೆನ್ಸ್ ತಂಡ ಕೂಡ ಪ್ರತೀ ಹೋಟೆಲ್‌ಗಳಿಗೆ ಭೇಟಿ ನೀಡಿ ಪರಿಶೀಲನೆ



ನಡೆಸುತ್ತಿದೆ. ಅಕ್ರಮವಾಗಿ ಸಂಗ್ರಹಿಸಿಟ್ಟು ಹೆಚ್ಚಿನ ದರಕ್ಕೆ ಮಾರಾಟ ಮಾಡುವುದು ಕಂಡುಬಂದರೆ ಅಂತಹ ಏಜೆನ್ಸಿಗಳನ್ನು ಬಂದ್ ಮಾಡಿಸಲಾಗುವುದು ಮತ್ತು ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಆಹಾರ ಇಲಾಖೆ ಜಂಟಿ ನಿರ್ದೇಶಕರಾದ ವಿನೋದಕುಮಾರ ಹೆಗ್ಗಳಗಿ ತಿಳಿಸಿದ್ದಾರೆ.

# 32 ವಾರಗಳಲ್ಲಿ ಜನಿಸಿದ ಮಗುವಿಗೆ ಮರುಜನ್ಮ: ಕೆಎಲ್ಇ ಆಸ್ಪತ್ರೆ ವೈದ್ಯರಿಂದ ಯಶಸ್ವಿ ಶಸ್ತ್ರಚಿಕಿತ್ಸೆ



**ಬೆಳಗಾವಿ ವಾರ್ತೆ**

**ಬೆಳಗಾವಿ:** 32 ವಾರಗಳಲ್ಲಿ ಜನಿಸಿ ಮಾರಣಾಂತಿಕ ಕಾಯಿಲೆಯಿಂದ ಬಳಲುತ್ತಿದ್ದ ನವಜಾತ ಶಿಶುವಿಗೆ ಶಸ್ತ್ರ ಚಿಕಿತ್ಸೆ ಮಾಡಿ, ಆ ಮಗುವನ್ನು ಬದುಕಿಸುವಲ್ಲಿ ಬೆಳಗಾವಿ ಕೆಎಲ್ಇ ಸಂಸ್ಥೆಯ ಡಾ.ಪ್ರಭಾ ಕರ ಕೋರೆ ಆಸ್ಪತ್ರೆ ಹಾಗೂ ವೈದ್ಯಕೀಯ ಸಂಶೋಧನಾ ಕೇಂದ್ರದ ವೈದ್ಯರು ಯಶಸ್ವಿಯಾಗಿದ್ದಾರೆ.

ಹುಕ್ಕೇರಿ ತಾಲೂಕಿನ ಬೆಲ್ಲದ ಬಾಗೇವಾಡಿ ಗ್ರಾಮದ ರೈತ ಮಹಿಳೆ ಮದುವೆಯಾಗಿ 14 ವರ್ಷಗಳ ನಂತರ ಗರ್ಭವತಿಯಾಗಿದ್ದರು. ಗರ್ಭಿಣಿಯಾಗಿ ಕೇವಲ 32 ವಾರಗಳಲ್ಲಿ ತೊಂದರೆ ಕಾಣಿಸಿಕೊಂಡ ಪರಿಣಾಮ ನಗರದ ಖಾಸಗಿ ಆಸ್ಪತ್ರೆಯಲ್ಲಿ ಡಾ.ಅಸ್ಮಿತಾ ಕಟ್ಟಿ ಅವರು ಶಸ್ತ್ರಚಿಕಿತ್ಸೆ ಮೂಲಕ ಹೆರಿಗೆ ಮಾಡಿಸಿದರು. ಅವಧಿಗೆ ಮುನ್ನ ಜನಿಸಿದ್ದ ರಿಂದ ಶಿಶುವಿನ ತೂಕ ಒಂದೂವರೆ ಕೆ.ಜಿ ಮಾತ್ರ ಇತ್ತು. ಪ್ಲೇಟ್‌ಲೆಟ್ ತೀವ್ರ ಕಡಿಮೆಗೊಂಡು, ರಕ್ತ ಹೆಪ್ಪುಗಟ್ಟುವಿಕೆಯಿಂದ ಬಳಲುತ್ತಿತ್ತು. ಆಸ್ಪತ್ರೆಗೆ ಬಂದ ತಕ್ಷಣ ಮಗುವನ್ನು ಸಮಗ್ರವಾಗಿ ತಪಾಸಣೆಗೊಳಡಿಸಿದಾಗ ನವಜಾತ ಶಿಶು ಅತ್ಯಂತ ಮಾರಣಾಂತಿಕ ಕಾಯಿಲೆಯಾದ 'ಜೈಂಟ್ ಸಿಸ್ಟಿಕ್ ಮೆಕೊನಿಯುಮ್ ಪೆರಿಟೊನಿಟಿಸ್' ದಿಂದ ಬಳಲುತ್ತಿರುವುದು ಗೊತ್ತಾಯಿತು.

ಆಗ ಡಾ.ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ವೈದ್ಯಕೀಯ ಸಂಶೋಧನಾ ಕೇಂದ್ರಕ್ಕೆ ಮಗುವನ್ನು ಸ್ಥಳಾಂತರಿಸಲಾಯಿತು. ಶಿಶುವಿನ ಸಮಸ್ಯೆ ಏನೆಂದು ಕಂಡುಕೊಂಡ ಇಲ್ಲಿನ ಚಿಕ್ಕಮಕ್ಕಳ ತಜ್ಞ ಶಸ್ತ್ರಚಿಕಿತ್ಸಕ ಡಾ.ಸಂತೋಷ ಕುರಬೆಟ್ ಅವರ ನೇತೃತ್ವದ ತಂಡವು ಹಸುಳೆಯನ್ನು ಸಾವಿನ ದವಡೆಯಿಂದ ಪಾರು ಮಾಡಿದೆ. ಅತ್ಯಂತ ಕ್ಲಿಷ್ಟಕರವಾದ ಈ ಶಸ್ತ್ರಚಿಕಿತ್ಸೆಯಲ್ಲಿ ಯಶಸ್ವಿಯಾಗಿದೆ. ಶಸ್ತ್ರಚಿಕಿತ್ಸೆಗೆ ಮೊದಲು ಶಿಶುವಿನ ಆರೋಗ್ಯಕ್ಕೆ ಅವಶ್ಯವಿರುವ ಎಂಡೋ-ಟ್ರಾಕಿಯಲ್ ಇಂಟ್ಯೂಬೇಷನ್ ಮಾಡಿ, ಪ್ಲೇಟ್‌ಲೆಟ್ ಮತ್ತು ಪ್ಲಾಸ್ಮಾ ರಕ್ತಪೂರಣ ನೆರವೇರಿಸಿ, ಅನಗತ್ಯವಾಗಿರುವ ಚೀಲವನ್ನು ತೆಗೆದುಹಾಕಿ, ಜೆಜುನಲ್ ಅಟ್ರೆಸಿಯಾವನ್ನು ಶಸ್ತ್ರಚಿಕಿತ್ಸೆ ನೆರವೇರಿಸುವ ಮೂಲಕ ಸರಿಪಡಿಸಿದರು.

ಸುಮಾರು 20 ವರ್ಷಗಳ ಕಾಲ ಚಿಕ್ಕಮಕ್ಕಳ ಶಸ್ತ್ರಚಿಕಿತ್ಸೆಯಲ್ಲಿ ನುರಿತಿರುವ ಡಾ.ಸಂತೋಷ ಕುರಬೆಟ್ ಅವರು 3 ಗಂಟೆಗಳ ಕಾಲ ಶಸ್ತ್ರಚಿಕಿತ್ಸೆ ನೆರವೇರಿಸಿದರು. ಕೇವಲ 7 ದಿನಗಳಲ್ಲಿ ಶಿಶು ಸಂಪೂರ್ಣ ವಾಗಿ ಚೇತರಿಸಿಕೊಂಡು ಆಸ್ಪತ್ರೆಯಿಂದ ಮನೆಗೆ ಮರಳಿದೆ.

ಈ ರೀತಿಯ ತೊಂದರ 'ಯಿಂದ ಜನ್ಮತಾಳಿದ ಶಿಶುಗಳಲ್ಲಿ ಕೆಲವೇ ಕೆಲವು ಪ್ರಕರಣಗಳು ಕಂಡು ಬಂದಿವೆ. ಅದರಲ್ಲಿಯೂ ಬದುಕುಳಿಯುವುದು ವಿರಳ ಎಂದು ವೈದ್ಯರು ತಿಳಿಸಿದ್ದಾರೆ.

ಯಶಸ್ವಿ ಶಸ್ತ್ರಚಿಕಿತ್ಸೆ ನೆರವೇರಿಸಿದ ಡಾ.ಸಂತೋಷ್ ನೇತೃತ್ವದ ತಂಡ ಮತ್ತು ನಂತರ ಆರೈಕೆ ಮಾಡಿದ ಡಾ.ರಾಮಚಂದ್ರ ಭಟ್, ಡಾ.ವಿನಾಯಕ ಜನ್ನು, ಡಾ.ಬೃಂದಾ ಕವಿ ಹಾಗೂ ನರ್ಸಿಂಗ್ ತಂಡವನ್ನು, ಕೆಎಲ್ಇ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ, ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ. ಕರ್ನಲ್ ಎಂ. ದಯಾನಂದ, ಜೆ.ಎನ್. ವೈದ್ಯಕೀಯ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ರಾಜೇಶ ಪವಾರ, ಕಾಹೆರನ ಉಪಕುಲಪತಿ ಡಾ.ಎನ್.ಎಸ್. ಮಹಾಂತಶೆಟ್ಟಿ, ಕುಲಸಚಿವ ಡಾ.ವಿ.ಎಂ. ಪಟ್ಟಣಶೆಟ್ಟಿ ಅಭಿನಂದಿಸಿದ್ದಾರೆ.

# 100 ಲಕ್ಷ.ರೂ ಮೊತ್ತದ ರಸ್ತೆ ಡಾಂಬರಿಕರಣ ಕಾಮಗಾರಿಗೆ ಚಾಲನೆ

**ಬೆಳಗಾವಿ ವಾರ್ತೆ**

**ಗೋಕಾಕ:** ತಾಲೂಕಿನ ಕೊಣ್ಣೂರ ಪಟ್ಟಣ ವ್ಯಾಪ್ತಿಯ ನಂದಗಾವ ಮುಖ್ಯ ರಸ್ತೆ ಯಿಂದ ಕಂಟಿ ಶ್ರೀ ಲಕ್ಷ್ಮಿ ದೇವಿ ಗುಡಿವರೆಗೆ ಜಿಲ್ಲಾ ಪಂಚಾಯತರಾಜ್ ಇಲಾಖೆ ವತಿಯಿಂದ ಅಂದಾಜು 100 ಲಕ್ಷ.ರೂ ಮೊತ್ತದ ರಸ್ತೆ ಡಾಂಬರಿಕರಣ ಕಾಮಗಾರಿಗೆ ಶಾಸಕ ರಮೇಶ ಜಾರಕಿಹೊಳಿ ಅವರು ಚಾಲನೆ ನೀಡಿದರು.

ಈ ಸಂಧರ್ಭದಲ್ಲಿ ಶಿವಾನಂದ ಹಿರೇಮಠ, ವಿನೋದ ಕರನಿಂಗ, ಪ್ರಕಾಶ ಕರನಿಂಗ, ಶಿವಲಿಂಗಯ್ಯ ಗಣಾಚಾರಿ, ಸಚಿನ ಸಮಯ, ಧರೆಪ್ಪ ಮಗದುಮ್, ಕುಮಾರ ಕೊಣ್ಣೂರ, ಧನ್ಯಕುಮಾರ ಮೇಗೇರಿ, ದರ್ಶನ ಕೋಳಿ ಸೇರಿದಂತೆ



ಕೊಣ್ಣೂರ, ನಂದಗಾಂವ, ಸಾವಳಗಿ, ಮುತ್ನಾಳ ಗ್ರಾಮದ ಜನ ಪ್ರತಿನಿಧಿಗಳು, ಹಿರಿಯರು ಉಪಸಿತರಿದ್ದರು.

# ಮಟಕಾ, ಗಾಂಜಾ ಪ್ರಕರಣ: ಮೂವರ ಬಂಧನ




**ಬೆಳಗಾವಿ ವಾರ್ತೆ**

**ಬೆಳಗಾವಿ:** ಮಟಕಾ, ಗಾಂಜಾ ಪ್ರಕರಣದಲ್ಲಿ ಭಾಗಿಯಾಗುತ್ತಿದ್ದ ಮೂವರನ್ನು ಬೆಳಗಾವಿ ಪೊಲೀಸರು ಬೇರೆ ಜಿಲ್ಲೆಗಳಿಗೆ ಗಡಿಪಾರು ಮಾಡಿದ್ದಾರೆ.

ನಿರಂತರವಾಗಿ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ ಸಾರ್ವಜನಿಕರ ನೆಮ್ಮದಿ ಹಾಳು ಮಾಡುತ್ತಿದ್ದ ಈ ಮೂವರನ್ನು ಬೆಳಗಾವಿ ಪೊಲೀಸರು ಬಂಧಿಸಿ ಕ್ರಮಕ್ಕೆ ಮುಂದಾಗಿದ್ದಾರೆ. ಶಹಾಪುರದ ಸರ್ಫರಾಜ ಶಬ್ಬೀರ ಅಹ್ಮದ್ ಶೇಖ್, ಟಿಳಕವಾಡಿ ಅಯೋಧ್ಯಾ ನಗರದ ವಿನಾಯಕ ಪ್ರಕಾಶ ಕೊಲ್ಲಾಪುರಿ ಮತ್ತು ಶಹಾಪುರ ಹೊಸೂರ ಬಸವನಗಲ್ಲಿಯ ಸಾಗರ ಪಾಂಡುರಂಗ ಸಾಲಗುಡೆ ಬಂಧಿತರು.

ಪದೇಪದೇ ಕಾನೂನು ಬಾಹಿರ ಕೃತ್ಯಗಳಲ್ಲಿ ತೊಡಗಿ ಸಾರ್ವಜನಿಕ ನೆಮ್ಮದಿ ಹಾಳು ಮಾಡುತ್ತಿದ್ದ ಆರೋಪದ ಮೇಲೆ ಬೆಳಗಾವಿ ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿತ್ತು. ಸರ್ಫರಾಜ್ ಮೇಲೆ ವಿವಿಧ ಪೊಲೀಸ್ ಠಾಣೆಗಳಲ್ಲಿ ಇಸ್ಪೀಟ್ ಆಟ ಆಡಿಸುವುದು ಮತ್ತು ಇತರ ಅಪರಾಧಗಳಿಗೆ ಸಂಬಂಧಿಸಿ ಒಟ್ಟು 16 ಪ್ರಕರಣ ದಾಖಲಾಗಿವೆ.  ವಿನಾಯಕ ಮೇಲೆ ಗಾಂಜಾ ಮಾರಾಟ ಮತ್ತು ಇತರ ಅಪರಾಧಗಳಿಗೆ ಸಂಬಂಧಿಸಿ ಐದು ಪ್ರಕರಣ ದಾಖಲಾಗಿದೆ. ಸಾಗರ ಮೇಲೆ ಇಸ್ಪೀಟ್ ಮತ್ತು ಇತರ ಅಪರಾಧಗಳಿಗೆ ಸಂಬಂಧಿಸಿದ ಆರು ಪ್ರಕರಣ ದಾಖಲಾಗಿದೆ. ಇವರನ್ನು ಮುಂದಿನ ಐದು ತಿಂಗಳ ಅವಧಿಗೆ ವಿಜಯಪುರ , ಕಾರವಾರ ಮತ್ತು ಯಾದಗಿರಿ ಜಿಲ್ಲೆಗಳಿಗೆ ಇವರನ್ನು ಗಡಿಪಾರು ಮಾಡಿ ಆದೇಶಿಸಿದ್ದಾರೆ.

# ಬೆಳಗಾವಿ: ಭೀಕರ ಕೊಲೆ ಪ್ರಕರಣವನ್ನು 24 ಗಂಟೆಯಲ್ಲೇ ಭೇದಿಸುವಲ್ಲಿ ಪೊಲೀಸರು ಯಶಸ್ವಿ

**ಬೆಳಗಾವಿ ವಾರ್ತೆ**

**ಬೈಲಹೊಂಗಲ:** ತಾಲೂಕಿನ ದೊಡವಾಡದಲ್ಲಿ ನಡೆದ ಕೊಲೆ ಪ್ರಕರಣವನ್ನು ಪೊಲೀಸರು ಭೇದಿಸಿದ್ದಾರೆ. ಕ್ಷುಲ್ಲಕ ದಾರಿ ವಿವಾದಕ್ಕೆ ಸಂಬಂಧಿಯನ್ನು ಕೊಂದಿದ್ದ ಆರೋಪಿಯನ್ನು ಜೈಲಿಗೆ ಕಳಿಸಲಾಗಿದೆ.  ದೊಡವಾಡ ಗ್ರಾಮದ ಕೊಪ್ಪ ಅಗಸಿಯ ನಿವಾಸಿ ಮಹೇಶ ಬಸಯ್ಯ ಉಪ್ಪಿನಮಠ ಎಂಬುವವರ ಭೀಕರ ಹತ್ಯೆ ಪ್ರಕರಣವನ್ನು ದೊಡವಾಡ ಪೊಲೀಸರು ಕೇವಲ ಒಂದೇ ದಿನದಲ್ಲಿ ಭೇದಿಸಿದ್ದಾರೆ. ಮೃತನ ಸಂಬಂಧಿ ರುದ್ರಯ್ಯ ಬಸಯ್ಯ ಉಪ್ಪಿನಮಠ (36) ಎಂಬಾತ ಕೃತ್ಯ ಎಸಗಿದವ. ಮನೆಯ ಮುಂದಿನ ದಾರಿ ವಿವಾದ ಹಾಗೂ ಹಳೆಯ ದ್ವೇಷದ ಹಿನ್ನೆಲೆಯಲ್ಲಿ ಈ ಕೊಲೆ ನಡೆದಿದೆ. ಮಾರ್ಚ್ 17 ರಂದು ಸಂಜೆ ಏಕಾಏಕಿ ಕುಡುಗೋಲಿನಿಂದ ಮಹೇಶನ ಕುತ್ತಿಗೆಗೆ ಇರಿದು ರಕ್ತದ ಮಡುವಿನಲ್ಲಿ ಕೆಡವಿದ್ದ ಆರೋಪಿ ಸ್ಥಳದಿಂದ ಪರಾರಿಯಾಗಿದ್ದ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಚುರುಕುಗೊಳಿಸಿ, ಆರೋಪಿಯನ್ನು ದಸ್ತಗಿರಿ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಆರೋಪಿ ಮೊದಲಿನಿಂದಲೂ ದಾರಿ ವಿಚಾರವಾಗಿ ಮೃತನೊಂದಿಗೆ ಜಗಳವಾಡುತ್ತಿದ್ದ ಎನ್ನಲಾಗಿದೆ. ಘಟನೆಯ ದಿನ ಚಿಕನ್ ಅಂಗಡಿ ಬಳಿ ನಡೆದ ಗಲಾಟೆಯಲ್ಲಿ ಮೃತ ಮಹೇಶ ಬುದ್ಧಿವಾದ ಹೇಳಿದ್ದಕ್ಕೆ ಕೆರಳಿದ ಆರೋಪಿ, 'ನನ್ನ ಮೇಲೆಯೇ ಹಿರೇತನ ತೋರಿಸುತ್ತೀಯಾ?' ಎಂದು ಆಕ್ರೋಶಗೊಂಡು



ಹೊಂಚು ಹಾಕಿ ಈ ಕೃತ್ಯ ಎಸಗಿದ್ದಾನೆ. ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಮಾರ್ಗದರ್ಶನದಲ್ಲಿ ಸಿಪಿಐ ಶಿವಾನಂದ ಗುಡಗನಟ್ಟಿ ಹಾಗೂ ಪಿಎಸ್ಐ ಹೆಚ್.ಕೆ. ಪಾಟೀಲ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದೆ. ಪೊಲೀಸ್ ತಂಡದ ಈ ಶ್ಲಾಘನೀಯ ಕಾರ್ಯಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ

# ಹೋಟೆಲ್‌ಗಳಲ್ಲಿ ಗ್ಯಾಸ್ ಸಿಲಿಂಡರ್ ಕೊರತೆಗೆ ಕ್ರಮಕೈಗೊಳ್ಳುವಂತೆ ಆಗ್ರಹಿಸಿ ಹೋಟೆಲ್ ಒಡೆಯರ ಸಂಘದಿಂದ ಮನವಿ



ಗದಗ : ಅವಳಿ ನಗರದ ಎಲ್ಲಾ ಹೋಟೆಲ್‌ಗಳಲ್ಲಿ ಗ್ಯಾಸ್ ಸಿಲಿಂಡರ್‌ಗಳ ಕೊರತೆಯಿಂದ ದಿನನಿತ್ಯದ ವ್ಯವಹಾರಕ್ಕೆ ತೊಂದರೆಯಾಗಿದ್ದು ಈ ಬಗ್ಗೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಹೋಟೆಲ್ ಒಡೆಯರ ಸಂಘದಿಂದ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾಧ್ಯಕ್ಷರಾದ ಎಚ್. ವಿಶ್ವನಾಥ ಶೆಟ್ಟಿ ಅವರು ಮಾತನಾಡಿ, ಗ್ಯಾಸ್ ಸಿಲಿಂಡರ್‌ಗಳ ಕೊರತೆಯಿಂದಾಗಿ ಹೋಟೆಲ್ ಮಾಲೀಕರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುವಂತಾಗಿದೆ. ಪ್ರತಿನಿತ್ಯವು ಹೋಟಲ್‌ಗಳಲ್ಲಿ ತಿಂಡಿ ಪದಾರ್ಥಗಳನ್ನು ಗ್ಯಾಸ್‌ನಲ್ಲಿ ಮಾಡುತ್ತಿದ್ದು, ಈ ಸಮಸ್ಯೆಯಿಂದಾಗಿ ಕೆಲವು ತಿಂಡಿ ಪದಾರ್ಥಗಳನ್ನು ಕಡಿತಗೊಳಿಸಿ ಅವಶ್ಯಕತೆನುಗುಣವಾಗಿ ಗ್ಯಾಸ್‌ನ್ನು ಉಪಯೋಗ ಮಾಡುತ್ತಿದ್ದೇವೆ. ಆದರೂ ದಿನ ಕಳೆದಂತೆ ಸಮಸ್ಯೆ ಹೆಚ್ಚಾಗಿ ಹೋಟೆಲ್‌ಗಳನ್ನು ಬಂದ್ ಮಾಡುವಂತಹ ಪರಸ್ಥಿತಿ ಎದುರಾಗಿದೆ. ಅಲ್ಲದೆ, ಗ್ಯಾಸ್ ಸಿಲೆಂಡರ್‌ಗಳ ಕೊರತೆಯಿಂದ ಹೋಟೆಲ್‌ಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೂ ಕೆಲಸ ಕಳೆದುಕೊಳ್ಳುವ ಭೀತಿ ಎದುರಾಗಿದೆ. ಆದ್ದರಿಂದ ತಾವುಗಳು ಈ ಸಮಸ್ಯೆಗೆ ಪರಿಹಾರ ಕಲ್ಪಿಸಿ, ಹೆಚ್ಚಿನ ಸಿಲಿಂಡರ್‌ಗಳನ್ನು ಸರಬರಾಜು ಮಾಡಲು ಸಂಬಂಧಪಟ್ಟವರಿಗೆ ಆದೇಶಿಸಿಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸಂಘದ ಗೌರವಾಧ್ಯಕ್ಷರಾದ ಕೆ. ಸುಧಾಕರರಾವ್, ರಾಜೀವ್ ಶೆಟ್ಟಿ, ಉಪಾಧ್ಯಕ್ಷರಾದ ಸುಧಾಕರ್ ಶೆಟ್ಟಿ, ಶಂಕರ ಹಾನಗಲ್, ಕಾರ್ಯದರ್ಶಿಗಳಾದ ಅಮೃತ ರಾವ್, ಸಹಕಾರ್ಯದರ್ಶಿ ಪ್ರಲ್ಹಾದ ಕಾರ್ಕಳ, ಖಜಾಂಚಿ ಜಯಪಾಲ ಶೆಟ್ಟಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ಭವ್ಯ ಶೋಭಾಯಾತ್ರೆ



ನವಲಗುಂದ: ಭಾರತಮಾತೆಯ ಸ್ತಬ್ಧ ಚಿತ್ರದೊಂದಿಗೆ ಯುಗಾದಿ ಹಬ್ಬದ ಭವ್ಯ ಶೋಭಾಯಾತ್ರೆ ಅದ್ದೂರಿಯಾಗಿ ನೆರವೇರಿತು.

ಪಟ್ಟಣದ ಗಾಂಧಿ ಮಾರುಕಟ್ಟೆ, ಗ್ರಾಮ ಚಾವಡಿ, ಕಳ್ಳಿಮಠ, ಲಿಂಗರಾಜ ವೃತ್ತ ಸೇರಿದಂತೆ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಮೆರವಣಿಗೆ ಯುದ್ದಕ್ಕೂ ಯುವಕರು ಕುಣಿದು ಸಂಭ್ರಮಿಸಿದರು.

ಇದಕ್ಕೂ ಮೊದಲು ಪಟ್ಟಣದ ಹೃದಯಭಾಗವಾಗಿರುವ ಶ್ರೀ ಗಣಪತಿ ದೇವಸ್ಥಾನದ ಮುಂಭಾಗ ಶಾಸಕ ಎನ್.ಎಚ್.ಕೋನರೆಡ್ಡಿ, ಮಾಜಿ ಶಾಸಕ ಶಂಕರ ಪಾಟೀಲ ಮುನೇನಕೊಪ್ಪ, ಕೆಪಿಸಿಸಿ ಸದಸ್ಯ ವಿನೋದ ಅಸೂಟಿ, ಬಿಜೆಪಿ ಮುಖಂಡ ದೇವರಾಜ ದಾಡಿಭಾವಿ ಗೋಮಾತೆಗೆ ಪೂಜೆ ಸಲ್ಲಿಸುವ ಮೂಲಕ ಶೋಭಾಯಾತ್ರೆಗೆ ಸಾಮೂಹಿಕ ಚಾಲನೆ ನೀಡಿದರು.

# ಜಿಲ್ಲಾ ಮಾನವ ಅಭಿವೃದ್ಧಿ ವರದಿ-2025 ಹಾಗೂ ಸಮಗ್ರ ಮತ್ತು ಸುಸ್ಥಿರ ಜಿಲ್ಲಾ ಅಭಿವೃದ್ಧಿ ಯೋಜನೆ -2031 ರ ವರದಿ ತಯಾರಿಕೆಗೆ ಜಿಲ್ಲಾ ಮಟ್ಟದ ಉಪಸಮಿತಿ ಸಭೆ



ಗದಗ: ಜಿಲ್ಲಾ ಮಾನವ ಅಭಿವೃದ್ಧಿ ವರದಿ-2025 ಹಾಗೂ ಸಮಗ್ರ ಮತ್ತು ಸುಸ್ಥಿರ ಜಿಲ್ಲಾ ಅಭಿವೃದ್ಧಿ ಯೋಜನೆ-2031 ರ ವರದಿ ತಯಾರಿಕೆಗೆ ಜಿಲ್ಲಾ ಮಟ್ಟದ ವಲಯವಾರು ಉಪಸಮಿತಿಗಳ ಸಮಿತಿ ಸಭೆಯು ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಗುರುವಾರ ಜಿಲ್ಲಾದಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಿ.ಎನ್.ಶ್ರೀಧರ್ ಅವರ ಅಧ್ಯಕ್ಷತೆಯಲ್ಲಿ ಜರುಗಿತು.

ಜಿಲ್ಲಾಧಿಕಾರಿ ಹಾಗೂ ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಿ.ಎನ್.ಶ್ರೀಧರ್ ಅವರು ಮಾತನಾಡಿ ಜಿಲ್ಲಾ ಮಾನವ ಅಭಿವೃದ್ಧಿ ವರದಿಯು ಸಮಗ್ರ ಅಭಿವೃದ್ಧಿ ಮತ್ತು ಜನರ ಜೀವನಮಟ್ಟ ಸುಧಾರಣೆಗೆ ಸಹಕಾರಿಯಾಗಲಿದೆ. ಮಾನವ ಅಭಿವೃದ್ಧಿ ವರದಿಯು ಇಡೀ ಜಿಲ್ಲೆಯ ಸಾರ್ವಜನಿಕರ ಅಭಿವೃದ್ಧಿಯ ಕುರಿತಂತೆ ಅಂಕಿ ಅಂಶಗಳು ಮತ್ತು ಜಿಲ್ಲೆಯಲ್ಲಿನ ಜನರ ಜೀವನ ಸ್ಥಿತಿ ಮತ್ತು ಅದನ್ನು ಇನ್ನಷ್ಟು ಅಭಿವೃದ್ಧಿಗೊಳಿಸುವ ಉದ್ದೇಶವನ್ನು ಹೊಂದಿದೆ. ಇದರಿಂದ ಹೊಸ ಯೋಜನೆಗಳ ಅನುಷ್ಟಾನ ಮಾಡಲು ಸಹ ಅನುಕೂಲವಾಗುತ್ತದೆ. ಜಿಲ್ಲೆಯ 2031 ರಲ್ಲಿ ಸುಸ್ಥಿರ ಅಭಿವೃದ್ಧಿ ಯೋಜನೆ ಕುರಿತಂತೆ ತಮ್ಮ ಇಲಾಖಾ ವ್ಯಾಪ್ತಿಯ ಮಾಹಿತಿಯನ್ನು ಜಿಲ್ಲಾ ಪಂಚಾಯತ್‌ಗೆ ಸಲ್ಲಿಸಬೇಕು ಎಂದರು.

ಜಿ.ಪಂ. ಮುಖ್ಯ ಯೋಜನಾಧಿಕಾರಿ ಎ.ಎ.ಕಂಬಾಳಿಮಠ ಸರ್ವರನ್ನು ಸ್ವಾಗತಿಸಿ ಸುಸ್ಥಿರ ಅಭಿವೃದ್ಧಿ ಯೋಜನೆ ವರದಿ ತಯಾರಿಕೆಗೆ ಜಿಲ್ಲಾ ಮಟ್ಟದ ಉಪಸಮಿತಿಗಳು ತಮ್ಮ ಇಲಾಖೆಯ ಮಾಹಿತಿಯನ್ನು ಸಲ್ಲಿಸಲು ತಿಳಿಸಿದರು.

ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಶ್ರೀಮತಿ ಪದ್ಮಾವತಿ ಜಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಎಸ್. ನೀಲಗುಂದ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

# ಜಾತ್ರಾಮಹೋತ್ಸವಕ್ಕೆ ಚಾಲನೆ



ಚನ್ನಮ್ಮನ ಕಿತ್ತೂರ: ಸಮೀಪದ ಇಟಗಿ ಗ್ರಾಮದ ಶ್ರೀ ಕಲ್ಮೇಶ್ವರ ಜಾತ್ರಾಮಹೋತ್ಸವಕ್ಕೆ ಚಾಲನೆ ನೀಡಲಾಯಿತು. ಕಳಸಾರೋಹಣ, ಅಭಿಷೇಕ ಹಾಗೂ ಮಹಾ ಪ್ರಸಾದ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.

ಬಸವಂತಪ್ಪ ಕರಮಳನವರ, ಶ್ರೀಕಾಂತ ಹಿರೇಮಠ, ಈಶ್ವರ ಶೀಲಿ, ಸಂತೋಷ ಬಳಗಪ್ಪನವರ, ಮಹಾಂತೇಶ ಲಂಗೋಟಿ, ಭರತೇಶ ಗಾಳಿ, ಬಸವರಾಜ ಬಡಿಗೇರ, ಬಸವರಾಜ ಸುಣಗಾರ ಹಾಗೂ ಗ್ರಾಮಸ್ಥರು ಇದ್ದರು.

BELAGAVI VARTE Kannada Daily morning news paper Editor, Printer, Publisher and Owned by MAHESHWARI BHIMASHI BHARAMANNAVAR, 221/1A/1A/1A MAHALINGESHWAR NAGAR, NEAR BCA HOSTEL BELAGAVI KARNATAKA 591307. Printed at RAJADHANI PRINTING PRESS, CTS NO.1720/B1, SHOP NO.2 KELKARBAG, BELAGAVI, KARNATAKA - 590001